ಜೂಲೈ 2021ರ ಸಂಚಿಕೆ

# ಕನ್ನಡ ಲಿಬರೇಶನ್

ಸಿಪಿಐ (ಎಂಎಲ್) ಲಿಬರೇಶನ್ ಮುಖವಾಣಿ



## ಅಗಲಿದವರ ನೆನಪಿನಲ್ಲಿ

ಪ್ರತಿಯೊಂದು ಸಾವನ್ನು ದಾಖಲಿಸೋಣ, ದುಃಖವನ್ನು ಹಂಚಿಕೊಳ್ಳೋಣ

# ಜುಲೈ 28ರ ಪ್ರತಿಜ್ಞೆ

**ಫ್ಯಾಸಿಸ್ಟ್ ಮೋದಿ ಆಡಳಿತದ ವಿರುದ್ಧ ಜನರ ನಿರ್ಣಾಯಕ ಹಂತದ ಚಳುವಳಿಗಾಗಿ ಸಿದ್ಧರಾಗಿ!**

ಜುಲೈ 28, 2021, ಕಾಮ್ರೇಡ್ ಚಾರು ಮಜುಂದಾರ್ ಅವರ 49 ನೇ ವರ್ಷದ ಸ್ಮರಣಾ ದಿನಾಚರಣೆಯ ಮತ್ತು ಸಿಪಿಐ (ಎಂಎಲ್) ಪುನರ್ಸ್ಥಾಪನೆಯಾದ 47 ನೇ ವಾರ್ಷಿಕೋತ್ಸವದ ದಿನವಾಗಿರುತ್ತದೆ. 1970ರ ದಶಕದ ಪ್ರಾರಂಭಿಕ ವರ್ಷಗಳಲ್ಲಿ ನಡೆದ ಕುಖ್ಯಾತ 1975 ರ ತುರ್ತು ಪರಿಸ್ಥಿತಿ ಘಟನೆ ನಡೆದು ಈಗ ಐದು ದಶಕಗಳು ಕಳೆದಿದ್ದೂ, ಮತ್ತೊಮ್ಮೆ ಭಾರತ ದೇಶವು ತುರ್ತುಪರಿಸ್ಥಿತಿ ದಮನಕಾರಿ ಆಡಳಿತಕ್ಕೆ ಮರಳಿದೆ, ಈ ರೀತಿಯಲ್ಲಿ ಆಗಾಗ್ಗೆ ವಸಾಹತುಶಾಯಿ ಅವಧಿಯ ಕ್ರೌರ್ಯ ಮತ್ತು ದಬ್ಬಾಳಿಕೆ ನಡೆಸುತ್ತಿರುವುದು ಅವಮಾನಕರವಾದ ಸಂಗತಿಯಾಗಿದೆ.

ನ್ಯಾಯಾಲಯಗಳು ಸಹ ಮೋದಿ ಆಡಳಿತದಲ್ಲಿರುವ ಅವಿವೇಕದ ದಬ್ಬಾಳಿಕೆಯು ಪ್ರಜಾಪ್ರಭುತ್ವದ ಸಾಂವಿಧಾನಿಕ ಚೌಕಟ್ಟಿಗೆ ಸರಿಹೊಂದುವುದಿಲ್ಲ ಎಂಬುವುದನ್ನು ತಿಳಿಸುವಷ್ಟರ ಮಟ್ಟಿಗೆ, ಇಂದು ದಬ್ಬಾಳಿಕೆಯು ಬಲವಾಗಿದೆ. ದೆಹಲಿ ಉಚ್ಚ ನ್ಯಾಯಾಲಯವು, ಭಿನ್ನಮತ ಮತ್ತು ವಿರೋಧಿಸುವ ಹಕ್ಕನ್ನು ಪ್ರಜಾಪ್ರಭುತ್ವದ ಕೇಂದ್ರಬಿಂದು ಎಂದು ಒತ್ತಿಹೇಳಿದೆ. ಸ್ವಾತಂತ್ರ್ಯ ದೊರೆತ ಏಳು ದಶಕಗಳ ನಂತರ ವಸಾಹತುಶಾಹಿ ಯುಗದ ದೇಶದ್ರೋಹ ಕಾನೂನು ಏಕೆ ಬೇಕು ಎಂದು ಸರ್ವೋಚ್ಚ ನ್ಯಾಯಾಲಯವು ಸರ್ಕಾರವನ್ನು ಕೇಳಿದೆ.

ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡುವ ಬೇಡಿಕೆ ಮತ್ತು ವಸಾಹತುಶಾಹಿ ಯುಗದ ದೇಶದ್ರೋಹ ಕಾಯ್ದೆ ಅಥವಾ ವಸಾಹತಶಾಹಿ ನಂತರದ ಯುಎಪಿಎಯಂತಹ ಕಠಿಣ ಕಾನೂನುಗಳನ್ನು ರದ್ದುಪಡಿಸುವುದಕ್ಕೆ ಸಂಬಂಧ ಪಟ್ಟಂತೆ ಸಾರ್ವಜನಿಕರಲ್ಲಿ ದೊಡ್ಡಮಟ್ಟದ ಚರ್ಚೆ ಮತ್ತೊಮ್ಮೆ ಪ್ರಾರಂಭವಾಗಿದೆ. ಇದರ ಜೊತೆಗೆ ಚಳುವಳಿಯ ಇತರೆ ಪ್ರಮುಖ ಪ್ರಶ್ನೆಗಳಾದ ತಾರತಮ್ಯದಿಂದ ಕೂಡಿರುವ ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ವಿನಾಶಕಾರಿ ಕೃಷಿ ಕಾನೂನುಗಳನ್ನು ರದ್ದುಪಡಿಸುವುದು, ಹೊಸ ಕಾರ್ಮಿಕ ಸಂಹಿತೆಗಳ ಬದಲು ಹಳೆ ಕಾರ್ಮಿಕ ಕಾನೂನುಗಳ ಜಾರಿ ಮತ್ತು ಕಾರ್ಮಿಕ ಹಕ್ಕುಗಳ ಪುನಃಸ್ಥಾಪನೆ, ಖಾಸಗೀಕರಣ ಮತ್ತು ಬೆಲೆ ಏರಿಕೆಯನ್ನು ನಿಲ್ಲಿಸುವುದು, ಉದ್ಯೋಗಗಳ ಸೃಷ್ಟಿ ಮತ್ತು ವೇತನ ಹೆಚ್ಚಳ, ಕೋವಿಡ್‌ನಿಂದ ಮೃತಪಟ್ಟವರಿಗೆ ಪರಿಹಾರ ಹಾಗೂ ಎಲ್ಲರಿಗೂ ಆರೋಗ್ಯ ಮತ್ತು ಶಿಕ್ಷಣದ ಖಾತರಿಯಂತಹ ಪ್ರಮುಖ ಒತ್ತಾಯಗಳು, ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಪ್ರಮುಕ ಕಾರ್ಯಸೂಚಿಯಾಗಿದೆ.

ಬದಲಾವಣೆಗಳಾಗಿರುವ ದೊಡ್ಡ ಸಚಿವ ಸಂಪುಟದ ಮೋದಿ ಸರ್ಕಾರವು, ಹೊಸ ಮಸೂದೆಗಳ ಕಾರ್ಯಸೂಚಿಯೊಂದಿಗೆ ಮುಂಗಾರು ಅಧಿವೇಶನಕ್ಕೆ ಸಿದ್ಧವಾಗುತ್ತಿರುವುದರಿಂದ, ಬೀದಿಗಿಳಿದು ಹೋರಾಟದಲ್ಲಿ ತೊಡಗಿರುವ ಚಳುವಳಿಗಳು ಮತ್ತು ಸಂಸದೀಯ ವ್ಯವಸ್ಥೆಯಲ್ಲಿರುವÀ ವಿರೋಧ ಪಕ್ಷಗಳು, ವಿಶೇಷವಾಗಿ ಎಡಪಕ್ಷಗಳು ಹೆಚ್ಚಿನ ಮಟ್ಟದಲ್ಲಿ ನಿರ್ಣಾಯತ್ಮಕವಾದ ಪ್ರತಿರೋಧವನ್ನ ತೋರಿಸಬೇಕಾಗಿದೆ.

ಇಂತಹ ಹೊಸ ಪರಿಸ್ಥಿತಿಯಲ್ಲಿ ಪಕ್ಷದ ಸಮಿತಿಗಳು ಮತ್ತು ಸದಸ್ಯರು ಸಂಪೂರ್ಣವಾಗಿ ತಮ್ಮನ್ನ ತಾವು ಅರ್ಪಿಸಿಕೊಂಡು ಹೋರಾಟ ನಡೆಸಬೇಕು. ಸತತ ಎರಡು ವರ್ಷಗಳಿಂದ, ನಾವು ಕೋವಿಡ್ 19 ಸಾಂಕ್ರಾಮಿಕ ಮತ್ತು ಅದರಿಂದಾದ ಸಂಕಷ್ಟಗಳನ್ನು ಎದುರಿಸುತ್ತಿದ್ದೇವೆ, ವಿಶೇಷವಾಗಿ ಲಾಕ್‌ಡೌನ್ ಮತ್ತು ಅದರ ನಿಬರ್ಂಧಗಳು. ಈ ಅವಧಿಯಲ್ಲಿ ನಾವು ಹಲವಾರು ಕಾಮ್ರೇಡ್‌ಗಳನ್ನು ಕಳೆದುಕೊಂಡಿದ್ದೇವೆ ಮತ್ತು ಅನೇಕರು ಇನ್ನೂ ಸಹ ಕೋವಿಡ್ ನಂತರ ಬರುವ ತೊಂದರೆಗಳಿಂದ ಬಳಲುತ್ತಿದ್ದಾರೆ. ಈ ಪರಿಸ್ಥಿತಿಯು, ನಮ್ಮ ಹಲವಾರು ಸಮ್ಮೇಳನದ ಚಟುವಟಿಕೆಗಳು ಮತ್ತು ಭೌತಿಕವಾಗಿ ಒಟ್ಟಾಗಿ ಸೇರಿ ಮಾಡುವ ಹೋರಾಟದ ಕಾರ್ಯತಂತ್ರಗಳ ವಿಧಾನಗಳಿಗೆ ತಡೆಯೊಡ್ಡಿದೆ. ಆದರೂ ನಾವು ಡಿಜಿಟಲ್ ಮತ್ತು ಭೌತಿಕ ರೂಪರೇಷಗಳನ್ನು ಒಟ್ಟುಗೂಡಿಸುವ ಮೂಲಕ ಅನೇಕ ಪರಿಣಾಮಕಾರಿ ಅಭಿಯಾನಗಳನ್ನು ಕೈಗೊಳ್ಳುವಲ್ಲಿ ಯಶಸ್ವಿಯಾಗಿದ್ದೇವೆ. ಸಾಂಕ್ರಾಮಿಕ ಅವಧಿಯು ಹೆಚ್ಚಾಗುತ್ತಿರುವುದರಿಂದ ಮತ್ತು 'ಸಹಜ ಜೀವನಕ್ಕೆ ಮರುಳುವ' ಬಗ್ಗೆ ಅನಿಶ್ಚಿತತೆಯು ಮೇಲುಗೈ ಸಾಧಿಸುತ್ತಿರುವುದರಿಂದ, ನಮ್ಮ ಸಕ್ರಿಯ ಪಾತ್ರವನ್ನು ಹೆಚ್ಚಿಸಲು ಮತ್ತು ನಮ್ಮ ಚಳುವಳಿಯ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಾಗಿ ಹೊಸ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕು.

ಕಾಮ್ರೇಡ್ ಚಾರು ಮಜುಂದಾರ್ ಅವರ ಕೊನೆಯ ಮಾತಾದ - ಜನರ ಹಿತಾಸಕ್ತಿಗಳನ್ನು ಎತ್ತಿಹಿಡಿಯುವುದು ಮತ್ತು ಪಕ್ಷವನ್ನು ಎಲ್ಲ ರೀತಿಯಿಂದಲೂ ಜೀವಂತವಾಗಿರಿಸುವುದು, ಎನ್ನುವುದು- 1970ರ ದಶಕದಲ್ಲಾದ ಹಿನ್ನಡೆಯಲ್ಲಿ ನಮಗೆ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿತು. ಇದೇ ಸ್ಫೂರ್ತಿ, ಮೋದಿ 2.0 ಮತ್ತು ಕೋವಿಡ್ 2.0 ರ ಮಾರಕ ಸಂಯೋಜನೆಯ ಇಂದಿನ ಸವಾಲಿನ ಪರಿಸ್ಥಿತಿಯನ್ನು ಎದುರಿಸಲು, ನಮ್ಮನ್ನು ಮುಂದೆ ಕೊಂಡೊಯ್ಯಬೇಕು. ಮುಂಬರುವ ದಿನಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಉಂಟಾಗುವ ಸಮರಗಳನ್ನು ಎದುರಿಸಲು ಸಿದ್ಧರಾಗುತ್ತಿರುವುದರಿಂದ ಮತ್ತು ಚಳುವಳಿ ಹಾಗೂ ಪಕ್ಷವನ್ನು ಪರಿಸ್ಥಿತಿಯ ಬೇಡಿಕೆಗಳಿಗೆ ಅನುಗುಣವಾಗಿ ಮುಂದೆ ಕೊಂಡೊಯ್ಯಬೇಕಾಗಿರುವುದರಿಂದ ಅಶಕ್ತತೆ ಮತ್ತು ನಿಷ್ಕ್ರೀಯತೆಗೆ ಅವಕಾಶವಿಲ್ಲ.

**ಕೇಂದ್ರೀಯ ಸಮಿತಿ**

**ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸ್ ವಾದಿ-ಲೆನಿನ್‌ವಾದಿ)**

# ಕನ್ನಡ ಲಿಬರೇಶನ್


## ಪರಿವಿಡಿ


ಜುಲೈ 28ರ ಪ್ರತಿಜ್ಞೆ 2

ಬಂಧನದಲ್ಲಿದ್ದ ಸ್ಟ್ಯಾನ್ ಸ್ವಾಮಿಯವರ ಸಾವಿಗೆ ಆಕ್ರೋಶ ಮತ್ತು ಶೋಕ 3

ಸಿದ್ದಲಿಂಗಯ್ಯ ನಮನ 4

ಅಸಹಜ ಸಾವುಗಳೂ ಆಡಳಿತ ಕ್ರೌರ್ಯವೂ 5

ಗೋಲ್ವಾಲ್‌ಕರ್ ಚಿಂತನೆಯ ಭಾರತ 7

ಕೊಡಗಿನ ರಕ್ಷಕರು 12

ಭತ್ತದ ಕಣಜದಿಂದ ಚೆಲ್ಲಿದ ರಕ್ತ 13

ಕೋವಿಡ್‌ನಿಂದ ಕಲಿತ ಪಾಠಗಳು 15

ನನ್ನ ಜನ 19

ನಮ್ಮ ಕಾರ್ಯಕ್ರಮಗಳು 20



**ಸಂಪಾದಕೀಯ ಮಂಡಳಿ**

ಕ್ಲಿಫ್ಟನ್ ಡಿ' ರೊಜಾರಿಯೋ
ಡಾ । ವಿ. ಲಕ್ಷ್ಮಿ ನಾರಾಯಣ
ನಾ. ದಿವಾಕರ್
ರತಿ ರಾವ್
ಪಿ.ಆರ್.ಎಸ್ ಮಣಿ
ಸಿಂಚನ

ಸಂಪಾದಕೀಯ ಇ-ಮೇಲ್:
kannadaliberation@gmail.com


# ಬಂಧನದಲ್ಲಿದ್ದ ಸ್ಟ್ಯಾನ್ ಸ್ವಾಮಿಯವರ ಸಾವಿಗೆ ಆಕ್ರೋಶ ಮತ್ತು ಶೋಕ

ಬಂಧನದಲ್ಲಿದ್ದ ಜೆಸ್ಯೂಟ್ ಸಮಾಜ ಸೇವಕರಾದ 84 ವರ್ಷ ವಯಸ್ಸಿನ ಫಾದರ್ ಸ್ಟ್ಯಾನ್ ಸ್ವಾಮಿಯವರ ಸಾವಿಗೆ ಆಕ್ರೋಶ ವ್ಯಕ್ತಪಡಿಸಿರುವ ಮತ್ತು ದುಃಖದಲ್ಲಿರುವ ಜಾರ್ಖಂಡ್ ಮತ್ತು ಇಡೀ ಭಾರತದ ಬಡ ಮತ್ತು ತುಳಿತಕ್ಕೊಳಗಾದ ಜನರೊಂದಿಗೆ ಸಿಪಿಐಎಂಎಲ್ ಜೊತೆಗಿರುತ್ತದೆ. ಮೋದಿ ಆಡಳಿತದ ಏಜೆಂಟರಾಗಿ ಕಾರ್ಯನಿರ್ವಹಿಸುತ್ತಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), "ಭೀಮಾ ಕೋರೆಗಾಂವ್ ಪ್ರಕರಣ"ಕ್ಕೆ ಸಂಬಂಧಿಸಿದಂತೆ ಮಾನವ ಹಕ್ಕುಗಳ ಪರ ಹೋರಾಟ ಮಾಡುವ ಪ್ರಮುಖ ಹೋರಾಟಗಾರರನ್ನು ನಿರಂತರವಾಗಿ ಬಂಧಿಸುತ್ತಿದೆ. ಮತ್ತು ಅವರಿಗೆ ಜಾಮೀನು ನಿರಾಕರಿಸುವ ಸಲುವಾಗಿ ಕಠಿಣ ಯುಎಪಿಎ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿ ದೀರ್ಘಕಾಲದ ವರೆಗೆ ವಿಚಾರಣಾಧೀನ ಖೈದಿಯನ್ನಾಗಿ ಬಂಧನದಲ್ಲಿರಿಸಲಾಗುತ್ತಿದೆ. ಫಾದರ್ ಸ್ಟ್ಯಾನ್‌ಸ್ವಾಮಿಯವರನ್ನು ಈ ಪ್ರಕರಣದಲ್ಲೇ ಬಂಧಿಸಲಾಗಿತ್ತು.

ಭೀಮಾ ಕೋರೆಗಾಂವ್ ಆರೋಪಿಗಳ ವಿರುದ್ಧ ವಿರುವ ಪ್ರಕರಣ ಹಾಸ್ಯಾಸ್ಪದವಾಗಿದೆ ಮತ್ತು ಅಂತಿಮವಾಗಿ ವಿಚಾರಣೆಯು ಪ್ರತಿಯೊಬ್ಬ ಆರೋಪಿಗಳನ್ನು ಮುಕ್ತಗೊಳಿಸುತ್ತದೆ ಎಂಬ ಸತ್ಯ ಎನ್‌ಐಎ ಮತ್ತು ಮೋದಿ ಆಡಳಿತಕ್ಕೆ ಸಂಪೂರ್ಣವಾಗಿ ತಿಳಿದಿದೆ. ಆದರೂ, ಈ ಪ್ರಕರಣದ ಆರೋಪಿಗಳ ವಿರುದ್ಧ ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸಿ, ನ್ಯಾಯಾಂಗ ವ್ಯವಸ್ಥೆಯೇ ಇವರನ್ನು ಬಂಧನದಲ್ಲಿರಿಸಿ ಚಿತ್ರಹಿಂಸೆ ನೀಡುವಂತೆ ಮತ್ತು ಮರಣದಂಡನೆಯನ್ನು ಸಹ ವಿಧಿಸುವಂತೆ ಮಾಡುವ ಗುರಿಯನ್ನು ಹೊಂದಿದ್ದಾರೆ.

ಫಾದರ್ ಸ್ಟ್ಯಾನ್‌ಸ್ವಾಮಿಯವರ ಜಾಮೀನು ವಿಚಾರಣೆಯು ಭಾರತದ ನ್ಯಾಯಾಂಗ ವ್ಯವಸ್ಥೆಗೆ ನಾಚಿಕೆಗೇಡಿನ ಸಂಗತಿಯಾಗಿರುವುದು ಇತಿಹಾಸವಾಗಲಿದೆ. ಸುಪ್ರೀಂ ಕೋರ್ಟ್ ತುರ್ತು ಪರಿಸ್ಥಿತಿಯಿಂದ ಸಾಂವಿಧಾನಿಕ ಸ್ವಾತಂತ್ರ್ಯವನ್ನು ರಕ್ಷಿಸುವಲ್ಲಿ ವಿಫಲವಾದ ಕಳಂಕಿತ ಎಡಿಎಂ ಜಬಲ್ಪುರ್ ಪ್ರಕರಣಕ್ಕಿಂತಲೂ ಇದು ಕೆಟ್ಟದಾಗಿದೆ. ಗೌರವದಿಂದ ನೀರು ಕುಡಿಯುವ ಸಿಪ್ಪರ್‌ಗಾಗಿ ಅವರ ಮಾಡಿದ್ದ ವಿನಂತಿಯನ್ನು ಪುರಸ್ಕರಿಸಲು ನ್ಯಾಯಾಧೀಶರು ಎರಡು ತಿಂಗಳುಗಳನ್ನು ತೆಗೆದುಕೊಂಡರು. ತನಗೆ ನಡೆಯಲು ಸಾಧ್ಯವಾಗುತ್ತಿಲ್ಲ ಮತ್ತು ತನ್ನ ಸಹ ಖೈದಿಗಳಿಂದ ಊಟ ತಿನ್ನಿಸಿಕೊಳ್ಳಬೇಕಾಗಿದೆ ಎಂದು ಮಾಡಿದರೂ, ನ್ಯಾಯಾಲಯವು ಇದನ್ನು ಕೇವಲ "ವೃದ್ಧಾಪ್ಯ" ದ ಚಿಹ್ನೆಗಳು ಮತ್ತು ಒಂದು ಜಾಮೀನು ನೀಡಲು ಸಾಕಷ್ಟು ಆಧಾರಗಳಿಲ್ಲ ಎಂದು ತಳ್ಳಿಹಾಕಿತು. ಫಾದರ್ ಸ್ಟ್ಯಾನ್‌ಸ್ವಾಮಿಯವರಿಗೆ ಜಾಮೀನು ನಿರಾಕರಿಸಿದ ಪ್ರತಿಯೊಬ್ಬ ನ್ಯಾಯಾಧೀಶರ ಕೈಯಲ್ಲೂ ಸ್ಟ್ಯಾನ್‌ರವರ ರಕ್ತದ ಕಲೆಗಳು ಇದ್ದಾವೆ.

ಹೋರಾಟಗಾರರ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿ, ನಂತರ ಜೈಲಿನಲ್ಲೇ ಅವರು ಕೊಳೆಯುವಂತೆ ಮಾಡಿ, ಕೊನೆಗೆ ಚಿತ್ರಹಿಂಸೆ ಮತ್ತು ಸಾವಿಗೆ ಗುರಿಯಾಗುವಂತೆ ಮಾಡುವ ತನಿಖಾ ಸಂಸ್ಥೆಗಳ ಅಧ್ಯಕ್ಷತೆಯನ್ನು ಭಾರತದ ಗೃಹ ಸಚಿವ ಅಮಿತ್ ಶಾ ವಹಿಸುತ್ತಾರೆ. 21 ತಿಂಗಳ ತುರ್ತು ಪರಿಸ್ಥಿತಿಯನ್ನು ಪ್ರಜಾಪ್ರಭುತ್ವವು ಆಕ್ರಮಣಕ್ಕೊಳಗಾದ ಸಮಯವೆಂದು ಖಂಡಿಸಿ ಅದೇ ಪ್ರಮುಖ ಇಂಗ್ಲಿಷ್ ದಿನಪತ್ರಿಕೆಯಲ್ಲಿ ಆಪ್-ಎಡ್ ಬರೆಯುವುದು ಕ್ರೂರ ವಿಪರ್ಯಾಸ.

ಫಾದರ್ ಸ್ಟ್ಯಾನ್‌ಸ್ವಾಮಿಯವರ ಸಾವಿಗೆ ದುಃಖಿಸುವುದು ಮತ್ತು ಮರುಗುವುದು ಸಾಕಾಗುವುದಿಲ್ಲ - ಅವರ ಬಂಧನದಲ್ಲುಂಟಾದ ಸಾವು ನಮ್ಮ ಆಕ್ರೋಶಕ್ಕೆ ಕಾರಣವಾಗಿದೆ. ಭಾರತವನ್ನು ಆಳುವ ಫ್ಯಾಸಿಸ್ಟರ ದಾಳಿಯ ವಿರುದ್ಧ ಧೈರ್ಯದಿಂದ ನಿಂತು, ಭಾರತದ ಅತ್ಯಂತ ತುಳಿತಕ್ಕೊಳಗಾದ ಜನರಿಗೆ ನ್ಯಾಯ ಮತ್ತು ಘನತೆಯನ್ನು ದೊರಕಿಸುವ ನಿಟ್ಟಿನಲ್ಲಿ ಫಾದರ್ ಸ್ಟ್ಯಾನ್‌ಸ್ವಾಮಿಯವರ ಹೋರಾಟವನ್ನು ಮುಂದುವರಿಸುವ ಮೂಲಕ ಅವರಿಗೆ ಗೌರವವನ್ನು ಸಲ್ಲಿಸೋಣ.

**ಸಿಪಿಐಎಂಎಲ್ ಕೇಂದ್ರ ಸಮಿತಿ**

## ಟಿಪ್ಪಣಿ

# ಸಿದ್ದಲಿಂಗಯ್ಯ ನಮನ



ಸುಪ್ರಸಿದ್ಧ ಬಂಡಾಯ ಸಾಹಿತಿ ಮತ್ತು ದಲಿತ ಕವಿ ಸಿದ್ದಲಿಂಗಯ್ಯ ಅವರು ಇತ್ತೀಚೆಗೆ ನಿಧನರಾಧರು. ಅವರು ಸಾವಿರದ ಓಂಬೈನೂರು ಎಪ್ಪತ್ತರ ದಶಕದಲ್ಲಿ ಕರ್ನಾಟಕದಲ್ಲಿ ಕಂಡು ಬಂದ ಎಡಪಂಥೀ ಯ ಮತ್ತು ದಲಿತ ಚಳುವಳಿಯ ಮುಖ್ಯ ಪ್ರತಿನಿದಿಯಾಗಿದ್ದವರು. ನಮ್ಮ ದೇಶದ ಕ್ರಾಂತಿಕಾರಿ ಮತ್ತು ಜನಪರ ಚಳುವಳಿಯ ಅತ್ಯಂತ ಉತ್ಕ ರ್ಷದ ಪರ್ವ 70 ರ ದಶಕ ಕಾಲ. 67 ರ ನಕ್ಸಲಬಾರಿ, ವಿಯತ್ನಾಮ್ ಯುದ್ಧ, ಪ್ರಪಂಚಾದ್ಯಂತ ಅಮೇರಿಕನ್.ಸಾಮ್ರಾಜ್ಯ ಶಾಯಿಯ ವಿರುದ್ಧ ಪ್ರತಿರೋಧ. ಎಲ್ಲಾ ದೇಶಗಲ್ಲಿ ವರ್ಗ ಹೋರಾಟ ಗಳಿಂದಾಗಿ ಎಲ್ಲೆಡೆಯಲ್ಲಿಯೂ ಕ್ರಾಂತಿಕಾರಿ ಸನ್ನಿವೇಶ. ಅದೇ ಸಮಯದಲ್ಲಿ ಅಮೆರಿಕದ ಕಪ್ಪು ಜನರ ಬ್ಲ್ಯಾಕ್ ಪ್ಯಾಂಥರ್ ಚಳುವಳಿ ಎಲ್ಲರ ಗಮನ ಸೆಳೆದಿತ್ತು. ಮಹಾರಾಷ್ಟ್ರದಲ್ಲಿ ಜಡ್ಡು ಹಿಡಿಡಿದ್ದ ರಿಪಬ್ಲಿಕನ್ ಪಕ್ಷದ ನಾಯಕತ್ವ ದ ವಿರುದ್ಧ ಅಲ್ಲಿನ ಸಾಹಿತಿ ಗಳು ಮತ್ತು ಯುವ ಜನರು ದಲಿತ್ ಪ್ಯಾಂಥರ್ಸ್ ಸ್ಥಾಪಿಸಿದರು. ಅದೇ ವೇಳೆಗೆ ಕರ್ನಾಟಕದ ದಲಿತ ಬುದ್ದಿ ಜೀವಗಳು ಮತ್ತು ಸಾಹಿತಿಗಳ ಆಕ್ರೋಶ ಬೇಯುತ್ತಿತ್ತು.

ಅದಕ್ಕೆ ಕಿಚ್ಚು ಹಚ್ಚಿದ್ದು ಬಸವಲಿಂಗಪ್ಪ ನವರ ಬೂಸಾ ಚಳುವಳಿ. ಬೂಸಾ ಚಳುವಳಿ ಬಸವಲಿಂ ಗಪ್ಪ ಅವರ ಕ್ರಾಂತಿಕಾರಿ ಅಭಿಪ್ರಾಯಗಳ ವಿರುದ್ಧ ಅಷ್ಟೇ ಅಲ್ಲ, ದಲಿತರ ವಿರುದ್ದವೂ ಆಗಿತ್ತು. ಅದೇ ಸಮಯದಲ್ಲಿ ಬೂಸಾ ಚಳುವಳಿ ದಲಿತ ವಿದ್ಯಾರ್ಥಿಗಳ ವಿರುದ್ಧ ತಿರುಗಿತ್ತು. ಈ ಹಿನ್ನಲೆಯಲ್ಲಿಯೇ ದಲಿತ ಸಾಹಿತ್ಯ ಕರ್ನಾಟಕದಲ್ಲಿ ಹೊರ ಹೊಮ್ಮಿತು. ಸಿದ್ಧಲಿಂಗಯ್ಯ 70 ರ ದಶಕದಲ್ಲಿ ಹೊರಹೊಮ್ಮಿದ.ಕ್ರಾಂತಿಕಾರಿ ಅಲೆಯ ಭಾಗವಾಗಿದ್ದರು. ಅವರ "ಪಂಚಮ" ನಾಟಕ ದಲಿತರ ಅರಿವಿನ ಆಸ್ಫೋಟದ ಪ್ರತಿನಿದಿಯಾಗಿತ್ತು. ಆ ನಾಟಕದಲ್ಲಿ ದಲಿತ ಯುವಕ ಎಲ್ಲ ದಲಿತ ನಾಯಕರು ಮತ್ತು ಇಡೀ ವ್ಯವಸ್ಥೆಯನ್ನು ಪ್ರಶ್ನಿಸುವ ಕಥಾವಸ್ತು ಇದೆ. ಅವರ "ಹೊಲೆ ಮಾದಿಗರ ಹಾಡುಗಳು " ಮತ್ತು ಇನ್ನೂ ಇತರ ಅವರ ಕಾವ್ಯ ಕರ್ನಾಟಕದ ಉದ್ದಗಲಕ್ಕೂ ಪ್ರಸರಿಸಿ ದಲಿತರ ಆಕ್ರೋಶ ದ ದನಿಯಾಯಿತು ಮತ್ತು 1975 ಮತ್ತು 77 ರಲ್ಲಿ ಸ್ಥಬ್ದವಾಗಿದ್ದ ತುರ್ತು ಪರಿಸ್ಥಿಯ ದ ರಾಜಕೀಯ ಸ್ಥಿತಿಯಲ್ಲಿ ಅದು ಹೆಚ್ಚು ಪ್ರಸರಿತವಾಯಿತು. ಇಷ್ಟಾದರೂ ಸಿದ್ದಲಿಂಗಯ್ಯ ದಲಿತ ಚಳುವಲ್ಲಿ ಸಂಘಟನಾತ್ಮವಾಗಿ ಸಕ್ರಿಯವಾಗಿರಲ್ಲಿಲ್ಲ.

ಅವರು ಸಿಪಿಎಂ ಪಕ್ಷಕ್ಕೆ ಹೆಚ್ಚು ಹತ್ತಿರವಾಗಿದ್ದರೆಂಬ ಗುಮಾನಿ ಬಹಳ ಪ್ರಬಲವಾಗಿತ್ತು. ಅವರಲ್ಲದೇ ಕೆಲವರುವರು ನಕ್ಸ ಲ್ ಬೆಂಬಲಿಗರೆಂದು ಹೇಳಲಾಗುತ್ತಿತ್ತು. ಆದರೆ ಇವೆಲ್ಲಾ ಎಂದೂ ದಲಿತ ಚಳುವಳಿಯ ಗಂಭೀರವಾದ ಸೈದ್ಧಾಂತಿಕ ಬಿನ್ನಾಭಿಪ್ರಾಯವಾಗಿರಲಿಲ್ಲ. ಬರೀ ಗುಸುಗುಸು. ಮಾರ್ಕ್ಸ್ವಾದದ ಬಗ್ಗೆ ಒಂದು ಹಸಿಹಸಿ ಒಳಒಳಗಿನ ಬೇಗುದಿ ಇತ್ತು. ಎಡ ಪಂಥೀಯರು ದಲಿತ ಸಂಘಟನೆಗಳಿಂದ ಹೊರ ಬಂದರೂ ಚಳುವಳಿಯ ಸಂಗಾತಿಗಳಾಗಿ ಇದ್ದರು. ಅಂತೂ ಕರ್ನಾಟಕದ ದಲಿತ ಚಳುವಳಿಯ ಆರಂಭಿಕ ವರ್ಷಗಳಲ್ಲಿ ಮತ್ತು ತುರ್ತು ಪರಿಸ್ಥಿತಿಯಲ್ಲಿ ದಲಿತ ಚಳುವಳಿಯ ಸಂಘಟನೆಯಲ್ಲಿ ಸಿದ್ದಲಿ0 ಗಯ್ಯ ಅವರ ಕಾವ್ಯ ನೀಡಿದ ಕೊಡುಗೆ ಅಪಾರ.

1977 ರಲ್ಲಿ ತುರ್ತು ಪರಿಸ್ಥಿತಿ ಯನ್ನು ತೆರೆಯಲಾಯಿತು ಮತ್ತು ಜನತಾ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿತು. ನಂತರದಲ್ಲಿ ಕರ್ನಾಟಕದಲ್ಲಿಯೂ ರಾಜಕೀಯ ಬದಲಾವಣೆ ಕಾಣತೊಡಗಿತು. ರಾಮಕೃಷ್ಣ ಹೆಗ್ಗಡೆ ಸರ್ಕಾರದ ಅಸ್ತಿತ್ವತ್ವಕ್ಕೆ ಬಂದ ಮೇಲೆ, ಈ ಸರ್ಕಾರ ತಮ್ಮದೇ ಎಂಬ ಮನೋಭಾವ ಉಂಟಾಗಿ, ದಲಿತ ನಾಯಕತ್ವದಿಂದ ಸರ್ಕಾರದೊಂದಿಗೆ ವಶೀಲಿ ಬಾಜಿ ಶುರುವಾಯಿತು. ರಾಜಕೀಯ ಅಧಿಕಾರದ ರುಚಿ, ಸವಲತ್ತುಗಳನ್ನು ನೋಡಿದ ದಲಿತ ಸಂಘಟನೆಗಳ ನಾಯಕತ್ವ ನಿಧಾನವಾಗಿ ಎಡ ಬಲ ಉಪ ಜಾತಿಯ ಒಳ ಸುಳಿಯಲ್ಲಿ ಸಿಲುಕಿತು. ಅದರಿಂದ ಇಂದಿಗೂ ಬಿಡಿಸಿಕೊಳ್ಳಲಾಗಿಲ್ಲ.

ನಂತರದಲ್ಲಿ ಸಿದ್ದಲಿಂಗಯ್ಯ ದಲಿತ ಜನ ಸಾಮಾನ್ಯರ ಸಂಘಟನೆಯ ಬದಲು ಆಳುವ ವರ್ಗದ ಹಿಂಬಾಲಕರಾದರು. ಎರಡು ಬಾರಿ ಶಾಸಕರಾದರು, ಕಾಂಗ್ರೆಸ್, ಜನತಾದಳ ಪಕ್ಷಗಳ ಸರ್ಕಾರ ಇದ್ದರೂ ಅವರಿಗೆ ಏನೂ ತೊಂದರೆಯಾಗಲಿಲ್ಲ. ಬಿಜೆಪಿ ಗೂ ಹೊಂದಿಕೊಂಡರು. ಅವರು ಏನೇ ಅಧಿಕಾರ ಪಡೆದುಕೊಂಡರೂ ಜನ ವಿರೋಧಿ ನಿಲುವನ್ನು ಎಂದೂ ತೆಗೆದುಕೊಳ್ಳಲಿಲ್ಲ.

ಸಿದ್ದಲಿಂಗಯ್ಯ ತಮ್ಮ ಸಾಹಿತ್ಯದಲ್ಲಿ ಕೇವಲ ಅಸ್ಪೃಶ್ಯರ ದುಃಖ ದುಮ್ಮಾನ ಆಕ್ರೋಶಗಳಲ್ಲೂ ಪ್ರತಿಸುವ ಜತೆಗೆ ದಲಿತರ ವಿಮೋಚನೆಯನ್ನೂ ಮತ್ತು ಅಂಬೇಡ್ಕರ್ ಅವರ ಮಿತಿಯನ್ನೂ ಗಮನಿಸಿ ದ್ದಾರೆ ಮತ್ತು ಕೆಂಪು ಬಾವುಟದ ನಾಯಕತ್ವವನ್ನೂ ಎತ್ತಿ ಹಿಡಿದಿದ್ದಾರೆ. ಹೀಗಾಗಿ ಕರ್ನಾಟಕದ ಜನಪರ ಚಳುವಳಿಲ್ಲಿ ಅವರ ಕೊಡುಗೆಯನ್ನು ನೆನೆಯ ಬೇಕು.

## ಸಂಪಾದಕೀಯ

# ಅಸಹಜ ಸಾವುಗಳೂ ಆಡಳಿತ ಕ್ರೌರ್ಯವೂ

ಕೋವಿದ್ ನಂತಹ ಒಂದು ಸಾಂಕ್ರಾಮಿಕ ಉಂಟುಮಾಡಿದ ಅನಾಹುತ ಆಡಳಿತ ವ್ಯವಸ್ಥೆಯನ್ನು ಮತ್ತು ಸರ್ಕಾರವನ್ನು ಮತ್ತಷ್ಟು ಜಾಗೃತಗೊಳಿಸಬೇಕಿತ್ತು. ಚುರುಕುಗೊಳಿಸಬೇಕಿತ್ತು. ಅಧಿಕಾರ ರಾಜಕಾರಣದಲ್ಲಿ ಅಪರೂಪವೇ ಆಗಿರುವ ನಾಗರಿಕ ಹೊಣೆಗಾರಿಕೆ ಮತ್ತು ಮಾನವ ಸಂವೇದನೆ ಕೊಂಚವಾದರೂ ಕಾಣುವಂತಿರಬೇಕಿತ್ತು. ದಿನನಿತ್ಯ ಸಾವುಗಳನ್ನು ಎಣಿಸುವ ಅಧಿಕಾರ ಕೇಂದ್ರಗಳಲ್ಲಿ ಪ್ರತಿಯೊಂದು ಸಾವು ಮನಸನ್ನು ಪ್ರಕ್ಷುಬ್ಧಗೊಳಿಸುವ ವಿಕ್ಷಿಪ್ತತೆಯನ್ನು ಉಂಟುಮಾಡಬೇಕಿತ್ತು. ಇಡೀ ಸಮಾಜವೇ ಆರೋಗ್ಯದಿಂದಿದೆ ಎನ್ನುವ ಭ್ರಮೆಯಲ್ಲಿದ್ದ ಪ್ರಜೆಗಳಿಗೆ ಒಮ್ಮಿಂದೊಮ್ಮೆಲೆ ಸರಣಿ ಸಾವುಗಳು ಎದುರಾದಾಗ ನಮ್ಮ ಸಮಾಜ ಆಘಾತಕ್ಕೊಳಗಾಗಬೇಕಿತ್ತು. ಅಧಿಕಾರ ಪೀಠಗಳಲ್ಲಿರುವವರು, ಆಡಳಿತ ನಿರ್ವಹಣೆಯ ಹೊಣೆ ಹೊತ್ತವರು ಕನಿಷ್ಟ ತಮ್ಮ ವ್ಯಾಪ್ತಿಯಲ್ಲಿ ಉಂಟಾಗುವ ವ್ಯತ್ಯಯಗಳಿಂದ ಎಚ್ಚೆತ್ತುಕೊಳ್ಳಬೇಕು ಎಂಬ ನಿರೀಕ್ಷೆ ತಪ್ಪೇನಲ್ಲ. ಈ ನಿರೀಕ್ಷೆ, ಅಪೇಕ್ಷೆಯ ನಡುವೆಯೇ ನಮ್ಮ ನಡುವೆ ಅಸಹಜ ಸಾವುಗಳ ಮಹಾಪೂರವೇ ಹರಿದುಬಂದಿರುವುದನ್ನು ನೋಡಿದ್ದೇವೆ. ಸಾವಿನ ಸಂಖ್ಯೆ ಕಡಿಮೆಯಾಗಿದೆ ಎಂದರೂ ಮುಚ್ಚಿಟ್ಟ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ಸಾವು ಇಂದಿಗೂ ಜನರನ್ನು ಕಾಡುತ್ತಿದೆ. ದೂರದ ಗಂಗಾ ತೀರದಲ್ಲಿ ತೇಲಿಬರುತ್ತಿರುವ ಹೆಣಗಳು ಕೋವಿದ್ ಸೋಂಕಿತರ ಹೆಣಗಳಾಗಿ ಕಾಣುವುದಿಲ್ಲ. ಗಂಗೆಗೂ ಅನಾಥ ಶವಗಳಿಗೂ ಚಾರಿತ್ರಿಕವಾಗಿಯೇ ಅವಿನಾಭಾವ ಸಂಬಂಧವಿರುವುದರಿಂದ ಇದು ಸಹಜ ಪ್ರಕ್ರಿಯೆ ಎಂದೇ ಭಾವಿಸಿದರೆ ಅಚ್ಚರಿಯೇನಲ್ಲ. ಕರ್ನಾಟಕದಲ್ಲೂ ಅನಾಥ ಶವಗಳಿವೆ. ಇಲ್ಲಿ ಪ್ರಶ್ನೆ ಇರುವುದು ವೈದ್ಯಕೀಯವಾಗಿ ನಮ್ಮ ಸಮಾಜವನ್ನು ಮತ್ತು ಆಡಳಿತ ವ್ಯವಸ್ಥೆಯನ್ನು ಜಾಗೃತಗೊಳಿಸಬೇಕಿದ್ದ ಕೊರೋನಾ ಹೇಗೆ ಇಂತಹ ನಿಷ್ಕ್ರಿಯತೆಯನ್ನು ಸೃಷ್ಟಿಸಿದೆ ?

ಕೊರೋನಾ ಸೋಂಕು ಕಡಿಮೆ ಮಾಡಲು ಲಾಕ್‌ಡೌನ್ ವಿಧಿಸಿ, ಪರೀಕ್ಷೆಗಳ ಪ್ರಮಾಣವನ್ನು ತಗ್ಗಿಸಿ ಸಾವುಗಳ ಲೆಕ್ಕಾಚಾರದಲ್ಲಿ ಕೊಂಚ ವ್ಯತ್ಯಯ ಮಾಡುತ್ತಾ " ನಾವು ಗೆದ್ದೆವು " ಎಂದು ಬೀಗುವ ಎಲ್ಲ ಪ್ರಯತ್ನಗಳೂ ನಮ್ಮ ನಡುವೆ ನಡೆಯುತ್ತಿವೆ. ಈ ಪ್ರಯತ್ನಗಳ ನಡುವೆಯೇ ನಮ್ಮೊಳಗಿನ ಅಸೂಕ್ಷ್ಮತೆಗಳೂ ಹೊರಬರುತ್ತಿವೆ. ಇಷ್ಟರ ನಡುವೆ ರಾಜ್ಯದಲ್ಲಿ ಮೂರು ಮಹಾ ದುರಂತಗಳು ಸಂಭವಿಸಿವೆ. ಮೇ 2 ರಂದು ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಆಮ್ಲಜನಕದ ಕೊರತೆಯಿಂದ. 24 ಅಮಾಯಕ ಜನರು ಅಸಹಜ ಸಾವಿಗೀಡಾಗಿ ಎರಡು ತಿಂಗಳು ಕಳೆದಿದ್ದರೂ ಇನ್ನೂ ತನಿಖೆ ಚಾಲ್ತಿಯಲ್ಲಿದೆ. ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಜಿಲ್ಲಾಸ್ಪತ್ರೆಯೊಂದರಲ್ಲಿ ಆಮ್ಲಜನಕ ಪೂರೈಕೆ ಇಲ್ಲದೆ 24 ಜೀವಗಳು ಬಲಿಯಾಗಿರುವ ಸಂದರ್ಭದಲ್ಲೂ, ಆಡಳಿತಾರೂಢ ಸರ್ಕಾರ ಖರೀದಿ-ಪೂರೈಕೆ-ದಾಸ್ತಾನು-ಆದೇಶ ಮತ್ತಿತರ ಅಲಂಕಾರಿಕ ಪದಗಳ ಸುತ್ತ ಗಿರಕಿ ಹೊಡೆಯುತ್ತಿರುವುದನ್ನು ನೋಡಿದರೆ, ಸರ್ಕಾರ ಘೋಷಿಸಿದ ತಲಾ 2 ಲಕ್ಷ ರೂಗಳ ಪರಿಹಾರವೇ ಅಂತಿಮ ನ್ಯಾಯ ಎಂದು ಕಾಣುತ್ತಿದೆ.

ಜಿಲ್ಲೆಯಲ್ಲಿ ನಡೆದ ಇಂತಹ ಒಂದು ಹೃದಯವಿದ್ರಾವಕ ದುರಂತಕ್ಕೆ ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ, ಅಲ್ಲಿನ ಶಾಸಕರು ಮತ್ತು ಕೊಂಚಮಟ್ಟಿಗೆ ಸಂಸದರು ಸ್ವಪ್ರೇರಣೆಯಿಂದಲೇ ಹೊಣೆ ಹೊರಬೇಕಿತ್ತು. ಸಾರ್ವಜನಿಕವಾಗಿ ಖುಲ್ಲಂಖುಲ್ಲಾ ಕಾಣುವ ಇಂತಹ ಪ್ರಮಾದದ ಬಗ್ಗೆ ತನಿಖೆ ಪೂರ್ಣಗೊಳಿಸಲು ಒಂದು ತಿಂಗಳ ಅವಧಿ ಅವಶ್ಯವೇ ? ಆದರೆ ಸಾರ್ವಜನಿಕ ಪ್ರಜ್ಞೆ ಇರುವ ಯಾರಿಗಾದರೂ ಮೂಡಲೇಬೇಕಾದ ಒಂದು ಪ್ರಶ್ನೆ ಎಂದರೆ, ಒಂದು ವೇಳೆ ಸಾವಿಗೀಡಾದ 24 ಜನರು ಯಾವುದೋ ಒಂದು ಪಕ್ಷದ, ಸಂಘಟನೆಯ ಅಥವಾ ಗುಂಪಿನ ಕಾರ್ಯಕರ್ತರೋ ಅಥವಾ ನಾಯಕರೋ ಆಗಿದ್ದಲ್ಲಿ ಪರಿಸ್ಥಿತಿ ಏನಾಗಬಹುದಿತ್ತು ?

ಕೆಲವು ದಿನಗಳ ಹಿಂದೆ ಚಾಮರಾಜನಗರ ಜಿಲ್ಲೆಯಲ್ಲೇ ಮತ್ತೊಂದು ಘಟನೆ ಸಂಭವಿಸಿದೆ. ಮೂಕನಹಳ್ಳಿ ಗ್ರಾಮದಲ್ಲಿ ಒಂದು ಕುಟುಂಬದ ನಾಲ್ವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಡೀ ಕುಟುಂಬವೇ ಕೂಲಿ ಮಾಡುವ ಮೂಲಕವೇ ಜೀವನ ನಿರ್ವಹಣೆ ಮಾಡುತ್ತಿದ್ದು, ಕುಟುಂಬದ ಮುಖ್ಯಸ್ಥ ಮಹದೇವಪ್ಪ ಅವರಿಗೆ ಕೋವಿದ್ ಕಾರಣದಿಂದ ಕೂಲಿ ಮಾಡಲೂ ಸಾಧ್ಯವಾಗದೆ, ಬಹುಶಃ ಬಡತನದ ಬೇಗೆಗೆ ಬಲಿಯಾಗಿರಬಹುದು ಎಂದು ಶಂಕಿಸಲಾಗಿದೆ. ಕುಟುಂಬದ ನಾಲ್ವರೂ ಸದಸ್ಯರು ನೇಣಿಗೆ ಶರಣಾಗಿದ್ದಾರೆ. ಒಂದೂವರೆ ಎಕರೆ ಭೂಮಿಯಲ್ಲಿ ಬೇಸಾಯ ಮಾಡಿಕೊಂಡು, ಹಸು ಸಾಕಾಣಿಕೆ ಮೂಲಕ ಹಾಲು ಮಾರಾಟ ಮಾಡುತ್ತಾ ಬದುಕು ಸವೆಸುತ್ತಿದ್ದ ಈ ಕುಟುಂಬ ಬಹುಶಃ ಕೂಲಿಯೂ ಇಲ್ಲದೆ, ಕೃಷಿ ಆದಾಯವೂ ಇಲ್ಲದೆ ಆತ್ಮಹತ್ಯೆಯ ಹಾದಿ ಹಿಡಿದಿದೆ ಎನಿಸುತ್ತದೆ. ಮಹದೇವಪ್ಪನವರಿಗೆ ಕೊರೋನಾ ಸೋಂಕು ಉಂಟಾಗಿ ಗುಣಮುಖರಾಗಿದ್ದರೂ ಅವರ ಬಳಿ ಯಾರೂ ಹಾಲು ಕೊಳ್ಳುತ್ತಿರಲಿಲ್ಲ ಎನ್ನುವ ಸಂಶಯವೂ ಇದೆ.

ಈ ಸಾವಿಗೆ ಯಾರು ಹೊಣೆ ? ನಾಲ್ಕು ಲಕ್ಷ ರೈತರ ಆತ್ಮಹತ್ಯೆಯನ್ನೇ ಗಂಭೀರವಾಗಿ ಪರಿಗಣಿಸದೆ, ಕ್ಷುಲ್ಲಕ ಎಂದು ಭಾವಿಸುವ ಆತ್ಮನಿರ್ಭರ ಭಾರತದಲ್ಲಿ ಮೂಕನಹಳ್ಳಿಯ ನಾಲ್ಕು ಅನಾಥ ಶವಗಳು ಗಣನೆಗೇ ಬರುವುದಿಲ್ಲ. ಏಕೆಂದರೆ ಬಡತನ, ಹಸಿವು, ದಾರಿದ್ರ್ಯ ಮತ್ತು ಜೀವನೋಪಾಯದ ಸಂಕಷ್ಟಗಳಿಂದ ಸಾವಿನ ಹಾದಿ ಹಿಡಿಯುವ ಬಡ ಕುಟುಂಬಗಳ ಬಗ್ಗೆ ನಮ್ಮ ಆಳುವ ವರ್ಗಗಳು ಯಾವುದೇ ಸಂದರ್ಭದಲ್ಲೂ ಕಾಳಜಿ ವಹಿಸಿಲ್ಲ. ಇಂತಹ ಅನಾಥ ಶವಗಳು ಗಂಗೆಯಲ್ಲಿ ತೇಲದೆ ಇರಬಹುದು ಆದರೆ ಭಾರತದ ಮಣ್ಣಲ್ಲಿ ಮಣ್ಣಾಗಿ ಹೋಗುತ್ತಲೇ ಇವೆ. ವಿದರ್ಭದ ಕಬ್ಬು ಬೆಳೆಗಾರನೋ, ಪಂಜಾಬಿನ ಗೋಧಿ ಬೆಳೆಯುವವನೋ, ಮೂಕನಹಳ್ಳಿಯ ಕೃಷಿ ಕೂಲಿಯೋ, ಆಡಳಿತ ವ್ಯವಸ್ಥೆಯ ದೃಷ್ಟಿಯಲ್ಲಿ ನಿಕೃಷ್ಟವಾಗಿಬಿಡುತ್ತಾರೆ. ಹಾಗಾಗಿಯೇ ಈ ನಾಲ್ಕು ಸಾವುಗಳು ನಮ್ಮ ಜನಪ್ರತಿನಿಧಿಗಳಿಗೆ ಗಂಭೀರ ಪ್ರಕರಣ ಎನಿಸಿಯೇ ಇಲ್ಲ. ನಿತ್ಯ ಸಾವುಗಳಿಗೆ ದುಃಖಿಸುವವರೇ

# ಸಂಪಾದಕೀಯ

ಇರುವುದಿಲ್ಲ, ಕೊರೋನಾ ಸಂದರ್ಭದಲ್ಲಿ ಇಂತಹ ಅಸಹಜ ಸಾವುಗಳೂ ನಿತ್ಯಸಾವುಗಳೇ ಆಗಿಬಿಟ್ಟಿವೆ. ಮತ್ತೊಂದು ಘಟನೆಯಲ್ಲಿ ರಾಜಧಾನಿಯ ಸಮೀಪದಲ್ಲೇ ಇರುವ ರಾಮನಗರ ತಾಲ್ಲೂಕಿನ ಐಜೂರು ಗ್ರಾಮದಲ್ಲಿ, ನಿರ್ಮಾಣ ಹಂತದ ಮ್ಯಾನ್‌ಹೋಲ್‌ಗೆ ಇಳಿದ ಮೂವರು ಪೌರ ಕಾರ್ಮಿಕರು ವಿಷಾನಿಲ ಸೇವಿಸಿ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಹೊಸ ಚರಂಡಿಗೆ ಹಾಕಲಾಗಿದ್ದ ಬ್ಲಾಕ್ ತೆಗೆಯಲು 15 ಅಡಿ ಆಳದಲ್ಲಿನ ಮ್ಯಾನ್‌ಹೋಲ್‌ಗೆ ಮೂವರೂ ಇಳಿದಿದ್ದರು ಎಂದು ವರದಿಯಾಗಿದೆ. ಈ ಪ್ರಕರಣದಲ್ಲಿ ಮ್ಯಾನ್‌ಹೋಲ್‌ನಲ್ಲಿ ಕಾರ್ಯನಿರ್ವಹಿಸುವವರ ಬಗ್ಗೆ ಮುನ್ನೆಚ್ಚರಿಕೆಯ ಸುರಕ್ಷತಾ ಕ್ರಮಗಳನ್ನು ಅನುಸರಿಸದೆ ಇದ್ದುದೇ ದುರಂತಕ್ಕೆ ಕಾರಣವಾಗಿದೆ. ಮೂರು ಕುಟುಂಬಗಳು ಅನಾಥವಾಗಿವೆ. ನಿರ್ಮಲೀಕರಣ ಕಾರ್ಯಕರ್ತರಿಗೆ ಸೂಕ್ತ ಸುರಕ್ಷತೆಯ ಉಪಕರಣಗಳನ್ನು ಒದಗಿಸಬೇಕು ಎನ್ನುವ ನಿಯಮದ ಉಲ್ಲಂಘನೆ ಈ ಮೂವರು ಅಮಾಯಕರ ಸಾವಿಗೆ ಕಾರಣವಾಗಿದೆ.

ಇಲ್ಲಿ ಗುತ್ತಿಗೆದಾರ, ಕಾಮಗಾರಿ ಕೈಗೊಂಡ ನಗರಸಭೆಯ ಆಡಳಿತ ವ್ಯವಸ್ಥೆ, ಕಾಮಗಾರಿಯ ಮೇಲ್ವಿಚಾರಣೆ ವಹಿಸುವ ನಿರ್ವಾಹಕ ಇಂಜಿನಿಯರ್ ಮತ್ತು ಕೊರೋನಾ ಸಂದರ್ಭದ ನಿರ್ಬಂಧಗಳ ನಡುವೆಯೂ ಮುನ್ನೆಚ್ಚರಿಕೆ ವಹಿಸದೆ ಇಂತಹ ಕಾಮಗಾರಿಗಳನ್ನು ನಡೆಸುವ ಅಧಿಕಾರ ವರ್ಗಗಳು ಶಿಕ್ಷಾರ್ಹವಾಗುತ್ತವೆ. ಇಲ್ಲಿಯೂ ಮತ್ತದೇ ಮರಣೋತ್ತರ ಪರೀಕ್ಷೆ, ತನಿಖೆ, ವಿಚಾರಣೆ ಮತ್ತು ಜನಪ್ರತಿನಿಧಿಗಳ ಒತ್ತಾಸೆಗೆ ಮಣಿದು ಹಣಕಾಸಿನ ಪರಿಹಾರ ಇಷ್ಟರಲ್ಲೇ ನ್ಯಾಯ ವ್ಯವಸ್ಥೆ ತೃಪ್ತಿಪಟ್ಟುಕೊಳ್ಳುತ್ತದೆ. ಮ್ಯಾನ್‌ಹೋಲ್‌ಗಳಲ್ಲಿ ಉಸಿರುಗಟ್ಟಿ ಸಾಯುವ ಪ್ರಕರಣಗಳು ರಾಜ್ಯದಲ್ಲಿ ನಡೆಯುತ್ತಲೇ ಇದ್ದರೂ ಈ ರೀತಿಯ ನಿರ್ಲಕ್ಷ್ಯವೂ ಸಹ ಮುಂದುವರೆಯುತ್ತಲೇ ಇದೆ. ಮೃತಪಟ್ಟ ಮೂವರು ಕೂಲಿ ಕಾರ್ಮಿಕರು ಮತ್ತೊಂದು ಅಸ್ಮಿತೆ ಇಲ್ಲದ, ಅಸ್ತಿತ್ವ ಇಲ್ಲದ ಅನಾಥ ಶವಗಳಾಗಿಬಿಡುತ್ತಾರೆ. ಪರಿಹಾರದ ಚೆಕ್ ನೀಡುವ ಮೂಲಕ ಜನಪ್ರತಿನಿಧಿಗಳು ಮತ್ತು ಸರ್ಕಾರ ನ್ಯಾಯ ವ್ಯವಸ್ಥೆಯ ಬಾಗಿಲಿಗೆ ಬೀಗ ಜಡಿಯುತ್ತದೆ.

ಈ ಮೂರೂ ಘಟನೆಗಳನ್ನು ಸಮಾನ ಎಳೆಯಲ್ಲಿ ಬಂಧಿಸಿ ನೋಡಿದಾಗ ಸರ್ಕಾರದ, ಆರೋಗ್ಯ ಮತ್ತು ಆಡಳಿತ ವ್ಯವಸ್ಥೆಯ ನಿಷ್ಕ್ರಿಯತೆ, ನಿರ್ದಯತೆ, ನಿರ್ಭಾವುಕತೆ ಮತ್ತು ನಿರ್ಲಕ್ಷ್ಯ ಕಾಣುವುದು ಸುಲಭ. ಜೀವನ ಮತ್ತು ಜೀವನೋಪಾಯ ಎಂದರೆ ಕೇವಲ ಎರಡು ಹೊತ್ತಿನ ಕೂಳು ಮತ್ತು ಒಂದು ಸೂರು ಒದಗಿಸುವುದು ಮಾತ್ರ ಎಂದು ಭಾವಿಸುವ ಒಂದು ಮಾರುಕಟ್ಟೆ ವ್ಯವಸ್ಥೆಯಲ್ಲಿ ನಾವಿದ್ದೇವೆ. ಹಾಗಾಗಿ ಆಮ್ಲಜನಕ ಇಲ್ಲದೆ ಸತ್ತವರು, ಹಸಿವಿನಿಂದ ಸಾಯುವವರು, ಶ್ರಮದ ಬೆವರಿಗೆ ಬಲಿಯಾಗುವವರು ಈ ವ್ಯವಸ್ಥೆಯಲ್ಲಿ ಅಸ್ಮಿತೆ ಇಲ್ಲದವರಾಗಿಬಿಡುತ್ತಾರೆ. ಪ್ರತಿಯೊಬ್ಬ ಪ್ರಜೆಯ ಅನ್ನದ ಹಕ್ಕು, ಆರೋಗ್ಯದ ಹಕ್ಕು ಮತ್ತು ಜೀವನೋಪಾಯದ ಹಕ್ಕು ಭಾರತದ ಸಂವಿಧಾನ ನಮಗೆ ನೀಡಿರುವ ಅಮೂಲ್ಯ ಹಕ್ಕುಗಳು. ಈ ಮೂರರಿಂದ ವಂಚಿತರಾಗುವ ಕೋಟ್ಯಂತರ ಜನರ ನಡುವೆ ನಾವು ಸಂವಿಧಾನವನ್ನು ಗ್ರಾಂಥಿಕವಾಗಿ ಎದೆಗವುಚಿಕೊಂಡು ಸ್ತುತಿಸುತ್ತಾ ಕುಳಿತಿದ್ದೇವೆ. ಹಾಗಾಗಿಯೇ ಪ್ರಭುತ್ವದ, ಆಡಳಿತಾರೂಢ ಸರ್ಕಾರದ ನಿಷ್ಕ್ರಿಯತೆ ಮತ್ತು ನಿರ್ಲಕ್ಷ್ಯದಿಂದಲೇ ನಡೆಯುವ ಇಂತಹ ಹತ್ಯೆಗಳು ನಮಗೆ ಸಹಜ ಸಾವುಗಳು ಎನಿಸಿಬಿಡುತ್ತವೆ. ಹಣಕಾಸಿನ ಪರಿಹಾರದಲ್ಲಿ ಕೊನೆಗೊಳ್ಳುವ ಕ್ರಿಯೆಗಳಾಗಿಬಿಡುತ್ತವೆ.



ಅಸ್ಥಿ ವಿಸರ್ಜನೆಯ ಮೂಲಕ ಪವಿತ್ರ ನದಿ ನೀರಿನಲ್ಲಿ ತೊಳೆದುಹೋಗುವ ವಿದ್ಯಮಾನಗಳಾಗಿಬಿಡುತ್ತವೆ. ಈ ಅಸಹಜ ಸಾವುಗಳನ್ನು ಹೇಗೆ ತಡೆಗಟ್ಟಲು ಸಾಧ್ಯ ? ಈ ಪ್ರಶ್ನೆಗೆ ಜಡಗಟ್ಟಿದ ಆಳುವ ವರ್ಗಗಳಿಂದ ಉತ್ತರ ಪಡೆಯಲಾಗುವುದಿಲ್ಲ. ಸಂವಿಧಾನದಲ್ಲಿ ಉತ್ತರ ಕಂಡುಕೊಳ್ಳಬಹುದು. ಹಾಗಾದಲ್ಲಿ ಮಾತ್ರ ಈ ಹಂತಕ ಮಾರುಕಟ್ಟೆ ವ್ಯವಸ್ಥೆಯಿಂದ ವಿಮೋಚನೆ ಪಡೆಯಲು ಸಾಧ್ಯ. ಮನುಜ ಜೀವಗಳನ್ನೂ ಮಾರುಕಟ್ಟೆಯ ಸರಕುಗಳಂತೆ ಅಳೆದು ತೂಗಿ ವಿಲೇವಾರಿ ಮಾಡುವಂತಹ ಒಂದು ವ್ಯವಸ್ಥೆಯತ್ತ ಆತ್ಮನಿರ್ಭರ ಭಾರತ ದಾಪುಗಾಲು ಹಾಕುತ್ತಿದೆ. ಆಮ್ಲಜನಕ, ಲಸಿಕೆ ಮತ್ತು ಆಸ್ಪತ್ರೆ ಸೌಕರ್ಯಗಳ ಅವ್ಯವಸ್ಥೆ ಮತ್ತು ಅದನ್ನು ನಿರ್ವಹಿಸುತ್ತಿರುವ ರೀತಿಯೇ ಇದನ್ನು ಸೂಚಿಸುತ್ತದೆ. ಬಂಡವಾಳ, ಮಾರುಕಟ್ಟೆ ಮತ್ತು ಔದ್ಯಮಿಕ ಹಿತಾಸಕ್ತಿಯಿಂದಾಚೆಗೆ ಯೋಚಿಸುವ ವಿವೇಕವನ್ನೇ ಕಳೆದುಕೊಂಡಿರುವ ಒಂದು ಆಡಳಿತ ವ್ಯವಸ್ಥೆಯಲ್ಲಿ ನಾವಿದ್ದೇವೆ. ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆ ಇದನ್ನು ಸಮರ್ಥವಾಗಿ ಪೋಷಿಸುತ್ತದೆ.

ದೇಶದ ಆರೋಗ್ಯ ವ್ಯವಸ್ಥೆಯ ಖಾಸಗೀಕರಣವನ್ನು ಕೂಡಲೇ ನಿಲ್ಲಿಸಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲ ಸೌಕರ್ಯಗಳನ್ನು ಶೀಘ್ರವೇ ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಈ ಮೂಲಕ ಒತ್ತಾಯಿಸುತ್ತೇವೆ. ಗ್ರಾಮೀಣ ಪ್ರದೇಶಗಳಲ್ಲಿ ಆಸ್ಪತ್ರೆ ಸೌಕರ್ಯಗಳನ್ನು ಉತ್ತಮಪಡಿಸಿ, ಸಮರ್ಪಕವಾಗಿ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸುವ ಮೂಲಕ ಹಳ್ಳಿಯ ಜನತೆಗೆ ಮತ್ತು ಬಡ ಜನತೆಗೆ ಚಿಕಿತ್ಸಾ ಸೌಲಭ್ಯಗಳನ್ನು ಕೈಗೆಟುಕುವ ದರದಲ್ಲಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕಿದೆ.

ಹಾಗೆಯೇ ಕೊರೋನಾ ಸಂದರ್ಭದಲ್ಲಿ ನಮ್ಮ ದೇಶದ, ವಿಶೇಷವಾಗಿ ಹಳ್ಳಿಗಾಡಿನ ವೈದ್ಯಕೀಯ ಸೌಲಭ್ಯಗಳು ಮತ್ತು ಆಸ್ಪತ್ರೆಗಳ ದುಸ್ಥಿತಿಯನ್ನು ಕಂಡಿರುವ ಜನಸಾಮಾನ್ಯರೂ ಸಹ ತಮ್ಮ ಬದುಕುವ ಹಕ್ಕಿಗಾಗಿ, ಜೀವಿಸುವ ಹಕ್ಕುಗಳಿಗಾಗಿ, ಆಹಾರ ಮತ್ತು ಆರೋಗ್ಯದ ಹಕ್ಕುಗಳಿಗಾಗಿ ಹೋರಾಡಲು ಸಜ್ಜಾಗಬೇಕಿದೆ. ಸಂವಿಧಾನಾತ್ಮಕವಾಗಿ ನಮಗೆ ಒದಗಬೇಕಾದ ಸವಲತ್ತುಗಳನ್ನೂ ಸರ್ಕಾರಗಳು ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಐಕ್ಯತಾ ಹೋರಾಟಗಳ ಮೂಲಕ ಈ ಹಕ್ಕುಗಳನ್ನು ಪ್ರತಿಪಾದಿಸಲು ಪ್ರಜೆಗಳು ಸಜ್ಜಾಗಬೇಕಿದೆ.

ಲೇಖನ

# ಗೋಲ್ವಾಲ್‌ಕರ್ ಚಿಂತನೆಯ ಭಾರತ

2021ರ ಫೆಬ್ರವರಿ 19ರಂದು ಕೇಂದ್ರ ಸಂಸ್ಕøತಿ ಸಚಿವಾಲಯ ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಈ ರೀತಿಯ ಸಂದೇಶವನ್ನು ನೀಡಿತ್ತು: "ಮಹಾನ್ ಚಿಂತಕ, ವಿದ್ವಾಂಸ ಮತ್ತು ಮಹಾನ್ ನಾಯಕ ಎಮ್ ಎಸ್ ಗೋಲ್ವಾಲ್‌ಕರ್ ಅವರನ್ನು ಅವರ ಜನ್ಮದಿನದಂದು ಸ್ಮರಿಸಲಾಗುತ್ತಿದೆ. ಅವರ ಚಿಂತನೆಗಳು ಹಲವು ಪೀಳಿಗೆಗಳಿಗೆ ಸ್ಫೂರ್ತಿಯ ಸೆಲೆಯಾಗಿ ಮುಂದುವರೆಯಲಿದೆ ". ಮೋದಿ ಮತ್ತು ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ಆರೆಸ್ಸೆಸ್‌ನ ಸಂಸ್ಥಾಪಕ ಗೋಲ್ವಾಲ್‌ಕರ್ ಅವರ ಚಿಂತನೆ ಮತ್ತು ತತ್ವಗಳಿಂದ ಮಾರ್ಗದರ್ಶನ ಪಡೆಯುವುದು ಹೊಸ ವಿಚಾರವೇನಲ್ಲ. ಆದರೆ ಈ ಚಿಂತನೆಗಳಲ್ಲಿ ಯಾವುದೇ ವಿದ್ವತ್ ಆಗಲೀ, ಸ್ಫೂರ್ತಿಯ ಸೆಲೆಯಾಗಲೀ ಇಲ್ಲ ಎನ್ನುವುದೂ ಅಷ್ಟೇ ಸ್ಪಷ್ಟ. ಮೂಲತಃ ಗೋಲ್ವಾಲ್‌ಕರ್ ಅವರ ಚಿಂತನೆಗಳು ಹಿಂದೂ ಶ್ರೇಷ್ಠತೆಯ ಪ್ರತಿಪಾದನೆಯೇ ಆಗಿದ್ದು, ನಿರಂಕುಶಾಧಿಪತ್ಯದ, ಫ್ಯಾಸಿಸ್ಟ್ ಧೋರಣೆಯ, ಜಾತೀಯತೆಯ , ಪಿತೃ ಪ್ರಧಾನ ಧೋರಣೆಯ ಲಕ್ಷಣಗಳನ್ನೇ ಹೊಂದಿದ್ದು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿಯೇ ಇವೆ. ಗಾಂಧಿಯ ಹತ್ಯೆಯ ಪ್ರಕರಣದಲ್ಲಿ ಇತರ ಆರೆಸ್ಸೆಸ್ ಸದಸ್ಯರೊಡನೆ ಬಂಧನಕ್ಕೊಳಗಾಗಿದ್ದ ಗೋಲ್ವಾಲ್‌ಕರ್, ಕೆಲವು ಸಾಕ್ಷಿಗಳು ಹಿಂಜರಿದಿದ್ದರಿಂದ ಬಿಡುಗಡೆ ಹೊಂದಿದ್ದರು. ಗಾಂಧೀಜಿಯ ಹತ್ಯೆಯ ಸಂಚು ರೂಪಿಸುವಲ್ಲಿ ಗೋಲ್ವಾಲ್‌ಕರ್ ತಮ್ಮ ಹಿಂಬಾಲಕರಿಗೆ ಪ್ರಚೋದನೆ ನೀಡಿದ್ದರು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಾಗಿವೆ. ಈ ಸಾಕ್ಷಿಗಳನ್ನು ನಮ್ಮ ಮಾತಿನಲ್ಲಿ ಹೇಳುವ ಅವಶ್ಯಕತೆ ಇಲ್ಲ. ಗೋಲ್ವಾಲ್‌ಕರ್ ಅವರ ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್ಡ್ ( ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿಷ್ಕರ್ಷೆ 1939) ಮತ್ತು ಬಂಚ್ ಆಫ್ ತಾಟ್ಸ್ ( ಚಿಂತನೆಗಳ ಗೊಂಚಲು 1966) ಈ ಎರಡೂ ಕೃತಿಗಳಲ್ಲಿನ ಅವರದೇ ಮಾತುಗಳನ್ನು ಅವಲೋಕನ ಮಾಡಬಹುದು.

**ಯಹೂದಿಗಳ ದಮನಕ್ಕೆ ನಾಜಿ ಜರ್ಮನಿ ಅನುಸರಿಸಿದ ಮಾರ್ಗದ ಸಮರ್ಥನೆ :**

" ಇಂದು ಜರ್ಮನಿಯ ಜನಾಂಗೀಯ ಶ್ರೇಷ್ಠತೆಯ ಚರ್ಚೆ ವಿಶ್ವವ್ಯಾಪಿಯಾಗಿ ಹರಡಿದೆ. ಜನಾಂಗದ ಶ್ರೇಷ್ಠತೆ ಮತ್ತು ಸಂಸ್ಕøತಿಯನ್ನು ರಕ್ಷಿಸಲು ಜರ್ಮನಿ ಯಹೂದಿಗಳು ಪ್ರತಿನಿಧಿಸುವ ಯಹೂದ್ಯ ಜನಾಂಗವನ್ನು ನಿರ್ನಾಮ ಮಾಡುವ ಮೂಲಕ ಇಡೀ ಜಗತ್ತನ್ನೇ ಆಘಾತಕ್ಕೀಡುಮಾಡಿದೆ. ಇಲ್ಲಿ ಜನಾಂಗೀಯ ಶ್ರೇಷ್ಠತೆಯ ಪರಾಕಾಷ್ಠೆಯನ್ನು ಕಾಣಬಹುದು. ಮೂಲತಃ ತಮ್ಮ ಸಾಂಸ್ಕøತಿಕ ಬೇರುಗಳಲ್ಲಿಯೇ ವಿಭಿನ್ನವಾಗಿ ಕಾಣುವ ಜನಾಂಗಗಳು ಮತ್ತು ಸಂಸ್ಕøತಿಗಳು ಒಂದಾಗಿ ಬದುಕುವುದು ಎಷ್ಟು ಕಷ್ಟ ಎನ್ನುವುದನ್ನು ಜರ್ಮನಿ ಸ್ಪಷ್ಟಪಡಿಸಿದ್ದು ಈ ವಿಭಿನ್ನ ಜನಾಂಗಗಳನ್ನು ಒಂದುಗೂಡಿಸುವುದು ಎಷ್ಟು ಅಸಾಧ್ಯದ ಕೆಲಸ ಎನ್ನುವುದನ್ನೂ ನಿರೂಪಿಸಿದೆ. ಹಿಂದೂಸ್ತಾನದಲ್ಲಿರುವ ನಮಗೆ ಇದರಿಂದ ಕಲಿಯಲು ಮತ್ತು ಈ ಧೋರಣೆಯ ಲಾಭ ಪಡೆಯಲು ಸಾಕಷ್ಟು ಪಾಠ ಕಲಿಯುವುದಿದೆ." (ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿಷ್ಕರ್ಷೆ 1939 ನಾಗಪುರ)

**ಟಿಪ್ಪಣಿ :** ಇಲ್ಲಿ ಗೋಲ್ವಾಲ್‌ಕರ್ ಹಿಂದೂ-ಸ್ತಾನ್ ಪದವನ್ನು ಬಳಸುವ ಮೂಲಕ ಹಿಂದೂ ಅಧಿಪತ್ಯದ ರಾಷ್ಟ್ರವನ್ನು ಪ್ರತಿಪಾದಿಸುತ್ತಾರೆ. ಇದು ಸಾಮಾನ್ಯವಾಗಿ ಬಳಸಲಾಗುವ ಹಿಂದೂಸ್ತಾನದಿಂದ ಭಿನ್ನವಾದ ಕಲ್ಪನೆ. ಈ ಹಿಂದೂಸ್ತಾನ ಪರ್ಷಿಯಾ ಮೂಲದ ಹಿಂದೂ ಪದದಿಂದ ಬಳಕೆಗೆ ಬಂದಿದೆ. ಸಿಂಧೂ ನದಿಗೆ ಹಿಂದೂ ಎಂದು ಕರೆಯಲಾಗುತ್ತದೆ. ಹಾಗಾಗಿ ಹಿಂದೂಸ್ತಾನ ಎಂದರೆ ಸಿಂಧು ನದಿಯಿಂದ ಆಚೆಗೆ ಇರುವ ಭೂ ಖಂಡ ಎಂದರ್ಥ. ಇಂಡಿಯಾ ಎನ್ನುವ ಲ್ಯಾಟಿನ್ ಪದವನ್ನೂ ಸಹ ಪರ್ಷಿಯಾದ ಈ ಪದದಿಂದಲೇ ಎರವಲು ಪಡೆಯಲಾಗಿದೆ.

**ಮುಸಲ್ಮಾನರನ್ನು, ಕ್ರೈಸ್ತರನ್ನು ಪ್ರಜೆಗಳೆಂದು ಪರಿಗಣಿಸದೆ ಇರುವ ಪರಿಕಲ್ಪನೆ :**

" ಭಾರತದಲ್ಲಿರುವ ವಿದೇಶಿ ಜನಾಂಗಗಳು ಹಿಂದೂ ಸಂಸ್ಕøತಿ ಮತ್ತು ಭಾಷೆಯನ್ನು ಒಪ್ಪಿಕೊಳ್ಳಬೇಕು, ಹಿಂದೂ ಧರ್ಮವನ್ನು ಗೌರವಿಸಿ ಆರಾಧಿಸಲು ಕಲಿಯಬೇಕು, ಹಿಂದೂ ಜನಾಂಗ ಮತ್ತು ಸಂಸ್ಕøತಿಯನ್ನು, ಅಂದರೆ ಹಿಂದೂ ರಾಷ್ಟ್ರವನ್ನು ವೈಭವೀಕರಿಸುವುದನ್ನು ಹೊರತುಪಡಿಸಿ ಮತ್ತಾವುದೇ ರೀತಿಯ ಅನ್ಯ ಯೋಚನೆ ಮಾಡಕೂಡದು ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ತ್ಯಜಿಸಿ, ಕಳೆದುಕೊಂಡು ಹಿಂದೂ ಜನಾಂಗದಲ್ಲಿ ಐಕ್ಯವಾಗಬೇಕು, ಅಥವಾ ಹಿಂದೂ ರಾಷ್ಟ್ರಕ್ಕೆ ಶರಣಾಗಿ, ಸಂಪೂರ್ಣ ಬದ್ಧರಾಗಿ ಈ ದೇಶದಲ್ಲಿ ವಾಸಿಸಬಹುದು. ಯಾವುದೇ ಸವಲತ್ತುಗಳು, ಸೌಕರ್ಯಗಳು, ರಿಯಾಯಿತಿಗಳನ್ನು ನಿರೀಕ್ಷಿಸದೆ, ಯಾವುದೇ ರೀತಿಯ ಆದ್ಯತೆಯನ್ನಾಧರಿಸಿದ ಅವಕಾಶಗಳನ್ನು ನಿರೀಕ್ಷಿಸದೆ , ಪೌರತ್ವ ಹಕ್ಕುಗಳನ್ನೂ ಅಪೇಕ್ಷಿಸದೆ ಇಲ್ಲಿ ವಾಸಿಸಬಹುದು " ( ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿಷ್ಕರ್ಷೆ 1939-ಭಾರತ್ ಪ್ರಕಾಶನ ನಾಗಪುರ ).

2006ರಲ್ಲಿ ಆರೆಸ್ಸೆಸ್ ಗೋಲ್ವಾಲ್‌ಕರರ ಈ ಕೃತಿಯನ್ನು ನಿರಾಕರಿಸುವ ಪ್ರಯತ್ನ ನಡೆಸಿತ್ತು. ಆರೆಸ್ಸೆಸ್ ವಕ್ತಾರ ಎಂ ಜಿ ವೈದ್ಯ ಸಂದರ್ಶನವೊಂದರಲ್ಲಿ " ಎಲ್ಲರೂ ನಂಬುವ ಹಾಗೆ ಗೋಲ್ವಾಲ್‌ಕರರ ಕೃತಿ ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿಷ್ಕರ್ಷೆ, ಆರೆಸ್ಸೆಸ್‌ನ ಬೈಬಲ್ ಅಲ್ಲ. ಹಾಗೊಮ್ಮೆ ಅದು ಬೈಬಲ್ ಆಗಿದ್ದಲ್ಲಿ ಸಂಘಪರಿವಾರದ ಪ್ರತಿಯೊಬ್ಬ ಸದಸ್ಯರೂ ಅದನ್ನು ಓದಿರುತ್ತಿದ್ದರು. ಎಲ್ಲರ ಮನೆಯಲ್ಲೂ ಈ ಕೃತಿಯ ಒಂದು ಪ್ರತಿ ಇರಬೇಕಿತ್ತು. ಆದರೆ ಅದು ಹಾಗಾಗಿಲ್ಲ. ನಮಗೆ ಮುಖ್ಯವಾಗುವುದು ಗೋಲ್ವಾಲ್‌ಕರ್ ಅವರ ಚಿಂತನೆಗಳ ಗೊಂಚಲು ಪುಸ್ತಕ. ಏಕೆಂದರೆ 1940ರ ಜೂನ್ 21ರಂದು ಸರಸಂಘಚಾಲಕರಾಗಿ ನೇಮಕಗೊಂಡ ನಂತರದಲ್ಲಿ ಗೋಲ್ವಾಲ್‌ಕರ್ ಅವರ ಚಿಂತನೆಗಳು ಈ ಕೃತಿಯಲ್ಲಿದೆ " ಎಂದು ಹೇಳಿದ್ದರು. (ಅಕ್ಷಯ್ ಮುಕುಲ್, ಟೈಮ್ಸ್ ಆಫ್ ಇಂಡಿಯಾ, ಮಾರ್ಚ್ 2006). ಗೋಲ್ವಾಲ್‌ಕರ್ ಮುಕ್ತವಾಗಿ ನಾಜಿ ಚಿಂತನೆಗಳ ಪ್ರತಿಪಾದನೆ ಮಾಡಿದ್ದರಿಂದ ಮುಜುಗರಕ್ಕೊಳಗಾಗಿದ್ದ ಆರೆಸ್ಸೆಸ್ ಇದರಿಂದ ಪಾರಾಗಲು ಯತ್ನಿಸಿದ್ದು ನಿಜ. ಆದರೆ ಚಿಂತನೆಗಳ ಗೊಂಚಲು ಪುಸ್ತಕದಲ್ಲಿಯೂ ಸಹ, ನಾವು ಮತ್ತು ನಮ್ಮ

# ಲೇಖನ

ರಾಷ್ಟ್ರೀಯತೆಯ ನಿಷ್ಕರ್ಷೆ ಕೃತಿಯಲ್ಲಿ ಹೇಳಲಾಗಿರುವ ಅಭಿಪ್ರಾಯಗಳನ್ನು ಅನುಮೋದಿಸಲಾಗಿದೆ. ಇನ್ನೂ ವಿಸ್ತøತವಾಗಿ ವ್ಯಾಖ್ಯಾನಿಸಲಾಗಿದೆ. ಮೊದಲ ಕೃತಿಯಲ್ಲಿ ಅಲ್ಪಸಂಖ್ಯಾತರು ಹಿಂದೂ ಜನಾಂಗದಲ್ಲಿ ವಿಲೀನವಾಗಲು ಕರೆ ನೀಡಲಾಗಿತ್ತು. ಎರಡನೆ ಕೃತಿಯಲ್ಲಿ ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಒಂದಾಗುವಂತೆ ಕರೆ ನೀಡಲಾಗಿದೆ. ಈ ರಾಷ್ಟ್ರೀಯತೆಯನ್ನೇ ಕೃತಿಯಲ್ಲಿ ಹಿಂದೂ ಎಂದು ಪರಿಗಣಿಸಲಾಗಿದೆ.

**ಹಿಂದೂ ಎಂದರೆ ರಾಷ್ಟ್ರೀಯ ; ಹಿಂದುಯೇತರ ಅಸ್ಮಿತೆ ಎಂದರೆ ವಿಭಜಕ, ಕೋಮುವಾದಿ :**

ಹಿಂದೂಗಳು ಎಂದಿಗೂ ಭಯೋತ್ಪಾಕರಾಗುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಭಾಷಣಗಳಲ್ಲಿ ಹೇಳುತ್ತಲೇ ಇರುತ್ತಾರೆ. ಯಾವುದೇ ಒಬ್ಬ ಹಿಂದೂ ಭಯೋತ್ಪಾದಕ ಕೃತ್ಯ ಎಸಗಿದ್ದಾನೆ ಎಂದು ಹೇಳುವುದು ಅಪಮಾನ ಮಾಡಿದಂತೆ ಎಂದೂ ಹೇಳುತ್ತಿರುತ್ತಾರೆ. ಅಂದರೆ ಗೋಡ್ಸೆಯಿಂದ ಪ್ರಗ್ಯಾ ಠಾಕುರ್ವರೆಗೆ, ಗೌರಿ ಲಂಕೇಶ್ ಹಂತಕರವರೆಗೆ, ರಾಜಕೀಯ ಪ್ರೇರಿತ ಹತ್ಯೆ ಮಾಡುವ ಹಿಂದೂಗಳು, ನಿಶ್ಯಸ್ತ್ರ ನಾಗರಿಕರ ಮೇಲೆ ಬಾಂಬ್ ದಾಳಿ ನಡೆಸುವ ಹಿಂದೂಗಳು ಭಯೋತ್ಪಾದಕರಲ್ಲ ಎಂದಂತಾಯಿತು. ಏಕೆಂದರೆ ಇಂತಹ ಹಿಂಸಾತ್ಮಕ ಕೃತ್ಯಗಳನ್ನು ಹಿಂದೂ ರಾಷ್ಟ್ರದ ಚೌಕಟ್ಟಿನಲ್ಲಿ ದೇಶಭಕ್ತಿಯ ಕೃತ್ಯಗಳೆಂದು ಭಾವಿಸಲಾಗುತ್ತದೆ.

ಈ ಪರಿಕಲ್ಪನೆಯನ್ನು ಗೋಲ್ವಾಲ್ಕರ್ ಅವರ ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿಷ್ಕರ್ಷೆ ಕೃತಿಯಿಂದಲೇ ನೇರವಾಗಿ ಪಡೆಯಲಾಗಿದೆ. ಈ ಕೃತಿಯಲ್ಲಿ ಗೋಲ್ವಾಲ್ಕರ್ "ಭಾರತದಲ್ಲಿ ಹಿಂದೂ ಎಂದರೆ ಹಿಂದೂ ರಾಷ್ಟ್ರದ ಪ್ರಜೆ ಅವರನ್ನು ಕೋಮುವಾದಿ ಎನ್ನಲಾಗುವುದಿಲ್ಲ " ಎಂದು ಹೇಳುತ್ತಾರೆ.

ಗೋಲ್ವಾಲ್ಕರ್ ಅಭಿಪ್ರಾಯದಲ್ಲಿ ಕೋಮುವಾದಿ ಎಂದರೆ, ಇಂದು ಅವರ ಹಿಂಬಾಲಕರು "ತುಕಡೆ ತುಕಡೆ ಗುಂಪು" ಎಂದು ಬಣ್ಣಿಸಲಾಗುವವರು ಅಥವಾ ಭಾರತವನ್ನು ವಿಭಜಿಸಲು, ಇಬ್ಭಾಗ ಮಾಡಲು ಉತ್ಸುಕರಾಗಿರುವವರು. ಅಂದರೆ ಗೋಲ್ವಾಲ್ಕರ್ ಅಭಿಪ್ರಾಯದಲ್ಲಿ ಕೋಮುವಾದಿ (ವಿಭಜಕರು) ಎಂದರೆ ಯಾರು. ಇದಕ್ಕೆ ಉತ್ತರ ನೋಡಿದರೆ ಅಚ್ಚರಿಯಾಗಬಹುದು.
ಮುಸಲ್ಮಾನರು, ಕ್ರೈಸ್ತರು ಮೂಲತಃ ಕೋಮುವಾದಿಗಳು, ಹಾಗೆಯೇ ಎಲ್ಲ ಹಿಂದೂಯೇತರರೂ ಕೋಮುವಾದಿಗಳೇ ಎಂದು ಅರ್ಥೈಸುವ ಗೋಲ್ವಾಲ್ಕರ್ ತಮ್ಮ ಕೃತಿಯಲ್ಲಿ " ತಮ್ಮ ಜೀವನ ವಾಹಿನಿಯಲ್ಲೇ ಭಾರತೀಯ ರಾಷ್ಟ್ರದ ಅಭಿವ್ಯಕ್ತಿಯನ್ನು ಹೊಂದಿರುವ ಹಿಂದೂ ಜನತೆಯ ವಿರುದ್ಧ ಕತ್ತಿ ಮಸೆಯುವ ಹಿಂದುಯೇತರ ಗುಂಪುಗಳೆಲ್ಲವೂ ಒಂದು ರೀತಿಯಲ್ಲಿ ಕೋಮುವಾದಿಗಳೇ " ಎಂದು ಹೇಳುತ್ತಾರೆ (ಚಿಂತನೆಗಳ ಗೊಂಚಲು ಭಾಗ ಎರಡು 10.)

**ಚಿಂತನೆಗಳ ಗೊಂಚಲು ಕೃತಿ ಕೆಲವು ಪ್ರಮುಖ ಉಲ್ಲೇಖಗಳು ಇಲ್ಲಿವೆ :**

ಸಿಖ್ಖರು ಮತ್ತು ಬೌದ್ಧರು : " ಹಿಂದೂ ಸಮಾಜದಲ್ಲೂ ಕೋಮುವಾದಿಗಳಿದ್ದಾರೆ. ಬಹುಮುಖೀ ಹಿಂದೂ ಮೇಧಾವಿಗಳ ಉಗಮದೊಂದಿಗೆ ಮೂಲತಃ ಪಂಥಗಳ ಸ್ವರೂಪದಲ್ಲಿ ಹೊರಹೊಮ್ಮಿದ ಈ ಕೋಮುವಾದಿಗಳು ಕ್ರಮೇಣ ತಮ್ಮ ಮೂಲ ಸ್ಫೂರ್ತಿಯ ಸೆಲೆಯನ್ನು ಮರೆತು, ತಮ್ಮ ಉಗಮದ ಮೂಲವನ್ನು ಮರೆತು ತಮ್ಮನ್ನು ತಾವೇ ಹಿಂದೂ ಸಮಾಜ ಮತ್ತು ಹಿಂದೂ ಧರ್ಮದಿಂದ ಭಿನ್ನ ಎಂದು ಪರಿಭಾವಿಸಲಾರಂಭಿಸಿದರು. ಈ ಆಧಾರದ ಮೇಲೆಯೇ ಇವರು ಪ್ರತ್ಯೇಕ ರಾಜಕೀಯ ಮತ್ತು ಆರ್ಥಿಕ ಸವಲತ್ತುಗಳನ್ನು ಅವಕಾಶಗಳನ್ನೂ ನೀಡುವಂತೆ ಆಗ್ರಹಿಸಲಾರಂಭಿಸಿದರು. ಈ ಬೇಡಿಕೆಗಳ ಈಡೇರಿಕೆಗಾಗಿಯೇ ಇವರು ಹಿಂದೂ ಸಮಾಜದಿಂದ ಭಿನ್ನ ಎಂದು ಬಿಂಬಿಸಿಕೊಂಡು ಪ್ರತಿಭಟನೆಯ ಮಾರ್ಗ ಅನುಸರಿಸಿದರು. ನವ ಬೌದ್ಧರು ಮತ್ತು ಸಿಖ್ಖರು ಈ ಗುಂಪಿಗೆ ಸೇರಿದವರಾಗಿದ್ದಾರೆ".

ತಮಿಳು, ಅಸ್ಸಾಮೀಯರು, ಮಣಿಪುರ ಮತ್ತು ನಾಗಾ ಜನಾಂಗ ಇತ್ಯಾದಿ : " ಕೋಮುವಾದದ ಮೂರನೆಯ ಸ್ವರೂಪವನ್ನು ದ್ರಾವಿಡ ಕಳ್ಗಂ ಮತ್ತು ದ್ರಾವಿಡ ಮುನ್ನೇಟ್ರ ಕಳ್ಗಂನಲ್ಲಿ ಕಾಣಬಹುದು. ಜನಾಂಗೀಯವಾಗಿ ತಮ್ಮ ವೈಶಿಷ್ಟ್ಯವನ್ನು ಪ್ರತಿಪಾದಿಸುವ ಇವರು ಪ್ರತ್ಯೇಕತೆಗಾಗಿ ಆಗ್ರಹಿಸುವುದೇ ಅಲ್ಲದೆ ತಮ್ಮ ಧ್ಯೇಯ ಸಾಧಿಸಲು ಸಮಾಜದಲ್ಲಿ ದ್ವೇಷ,. ಅಸೂಯೆ, ಶತ್ರುತ್ವ ಮತ್ತು ಹಿಂಸೆಯನ್ನು ಹರಡುತ್ತಾರೆ "

ಮೀಸಲಾತಿ ಮತ್ತಿತರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಎಸ್‌ಸಿ/ಎಸ್‌ಟಿ/ಒಬಿಸಿ ಗುಂಪುಗಳು : " ಕೋಮುವಾದಿಗಳ ನಾಲ್ಕನೆಯ ವರ್ಗದಲ್ಲಿ ಸ್ಪøಶ್ಯತೆ, ಅಸ್ಪøಶ್ಯತೆ, ಬ್ರಾಹ್ಮಣ, ಬ್ರಾಹ್ಮಣೇತರ ಇವೇ ಮುಂತಾದ ವಿಚಾರಗಳನ್ನು ಮುನ್ನೆಲೆಗೆ ತಂದು ವಿವಾದಗಳನ್ನು ಸೃಷ್ಟಿಸುವ ಮೂಲಕ ದ್ವೇಷ, ಶತ್ರುತ್ವವನ್ನು ಹರಡಿ, ತಮ್ಮ ವಿಶೇಷ ಸವಲತ್ತುಗಳನ್ನು ಗಳಿಸಲು ಸ್ವಾರ್ಥದ ಹಾದಿ ಅನುಸರಿಸುತ್ತಾರೆ "

ಎಸ್‌ಸಿ, ಎಸ್‌ಟಿ, ಒಬಿಸಿಗಳ ಚಳುವಳಿಗಳನ್ನು ಪ್ರತ್ಯೇಕತಾ ಆಂದೋಲನಗಳು ಎಂದೇ ಪರಿಗಣಿಸುವ ಗೋಲ್ವಾಲ್ಕರ್ " ಅವರನ್ನು ಹರಿಜನರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಂದು ಗುರುತಿಸುವ ಮೂಲಕ ನಮ್ಮ ಜನರ ನಡುವೆ ಅಸೂಯೆ ಮತ್ತು ಸಂಘರ್ಷವನ್ನು ಹುಟ್ಟುಹಾಕಿ ಪ್ರತ್ಯೇಕತಾ ಭಾವನೆಗಳನ್ನು ಸೃಷ್ಟಿಸಲಾಗುತ್ತಿದೆ. ಇವರನ್ನು ಹಣದ ಆಮಿಷ ತೋರಿಸಿ ಶಾಶ್ವತವಾಗಿ ತಮ್ಮ ಗುಲಾಮರಂತೆ ಮಾಡುವ ಉದ್ದೇಶದಿಂದ ವಿಶೇಷ ಸವಲತ್ತುಗಳಿಗಾಗಿ ಆಗ್ರಹಿಸುವಂತೆ ಪ್ರಚೋದಿಸುತ್ತಾರೆ "

ಭಾಷಾ ಅಲ್ಪಸಂಖ್ಯಾತರು- ಭಾಷೆ ಆಧಾರಿತ ಅಸ್ಮಿತೆಗಳು ಮತ್ತು ಚಳುವಳಿಗಳು : " ಇದು ಐದನೆಯ ಮಾದರಿ. ಭಾಷಾ ಸಮೂಹಗಳ ಕೋಮುವಾದ. ಇವರು ಇತರ ಭಾಷಿಕರ ವಿರುದ್ಧ ನೆರೆ ಪ್ರಾಂತ್ಯದವರ ವ ಇರುದ್ಧ ಮತ್ಸರವನ್ನು ಹೆಚ್ಚಿಸಿ, ವೈರತ್ವವನ್ನು ಹರಡಿ ದ್ವೇಷ ಮೂಡಿಸುತ್ತಾರೆ. ಈ ಪ್ರವೃತ್ತಿಯಿಂದಲೇ ಭಾಷಾ ಅಲ್ಪಸಂಖ್ಯಾತರು ಎಂಬ ಪರಿಕಲ್ಪನೆಯೂ ಹೊರಹೊಮ್ಮಿದೆ "

**ವಿಶಿಷ್ಟ ಪ್ರಾದೇಶಿಕ ಸಂಸ್ಕøತಿ ಅಥವಾ ರಾಜ್ಯತ್ವದ ಪ್ರತಿಪಾದನೆ :**

"ಕೋಮುವಾದದ ಆರನೆಯ ಮಾದರಿ ಎಂದರೆ ಸಂಕುಚಿತ ಪ್ರಾದೇಶಿಕ ಮನೋಭಾವ ಮತ್ತು ಇತರ ಪ್ರಾಂತ್ಯದ ಜನತೆಯ

# ಲೇಖನ

ಬಗ್ಗೆ ಅನಾರೋಗ್ಯಕರ ಭಾವನೆಗಳನ್ನು ಹೊಂದುವುದು. ದಕ್ಷಿಣ ಮತ್ತು ಉತ್ತರ, ಪಂಜಾಬಿ ಮತ್ತು ಪಂಜಾಬಿಯೇತರ, ಮರಾಠಿ ಮತ್ತು ಕನ್ನಡ, ಗುಜರಾತಿ ವಿರುದ್ಧ ಮರಾಠಿ, ಬಂಗಾಲ, ಬಿಹಾರ ಮತ್ತು ಒಡಿಷಾ ಇವೆಲ್ಲವೂ ಈ ಮಾದರಿಯಲ್ಲಿ ಕಂಡುಬರುತ್ತವೆ."

ಈ ಮೇಲಿನ ಅಸ್ಮಿತೆಗಳನ್ನು ಮತ್ತು ಹಿತಾಸಕ್ತಿಗಳನ್ನು ಪ್ರತಿಪಾದಿಸುವ ರಾಜಕೀಯ ಚಳುವಳಿಗಳು : " ಜಾತಿ, ಕುಲ, ಭಾಷೆ ಮುಂತಾದ ಅಸ್ಮಿತೆಗಳ ನಡುವೆ ಇರುವ ಭಿನ್ನತೆಯನ್ನೇ ಬಳಸಿಕೊಂಡು ಇನ್ನೂ ಹೆಚ್ಚು ಭಿನ್ನತೆಯನ್ನು ಸೃಷ್ಟಿಸುವ ಮತ್ತೊಂದು ರೀತಿಯ, ಏಳನೆಯ ಮಾದರಿಯ ಕೋಮುವಾದವೂ ಇದೆ. ಇದರಲ್ಲಿ ಚುನಾವಣಾ ಲಾಭಕ್ಕಾಗಿ ಪರಸ್ಪರ ದ್ವೇಷ ಹರಡಲಾಗುತ್ತದೆ. ಇದು ದೇಶವ್ಯಾಪಿ ಹರಡಿರುವ ಅಪಾಯಕಾರಿ ಕೋಮುವಾದ ಆಗಿದ್ದು, ಈಗ ಅಧಿಕಾರದಲ್ಲಿರುವ ರಾಜಕೀಯ ಪಕ್ಷವೂ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಅಪರಾಧಿ ಸ್ಥಾನದಲ್ಲಿ ನಿಲ್ಲುತ್ತವೆ. ಈ ರಾಜಕೀಯ ಸ್ವರೂಪದ ಕೋಮುವಾದ ಇರುವವರೆಗೂ ಮತ್ತಾವುದೇ ರೀತಿಯ ಕೋಮುವಾದವನ್ನು ಅಳಿಸಿಹಾಕಲು ಸಾಧ್ಯವಿಲ್ಲ "

ಈ ಮೇಲಿನ ವಿಚಾರಗಳ ಜೊತೆಗೆ ಗೋಲ್ವಾಲ್‌ಕರ್ ಸ್ತ್ರೀವಾದ ಮತ್ತು ಮಹಿಳಾ ಸಮಾನತೆಯ ಹಕ್ಕೊತ್ತಾಯಗಳನ್ನು ಮತ್ತೊಂದು ವಿಭಜಕ ಪ್ರವೃತ್ತಿ ಎಂದು ಪ್ರತಿಪಾದಿಸುತ್ತಾರೆ : " ಈಗ ಮಹಿಳಾ ಸಮಾನತೆಗಾಗಿ ಆಗ್ರಹಿಸಲಾಗುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಯಿಂದ ವಿಮೋಚನೆಗಾಗಿ ಆಗ್ರಹಿಸಲಾಗುತ್ತಿದೆ. ಲಿಂಗತ್ವದ ಆಧಾರದ ಮೇಲೆ ಅಧಿಕಾರಶಾಹಿಯಲ್ಲಿ ಮಹಿಳೆಯರ ಮೀಸಲಾತಿಗಾಗಿ ಆಗ್ರಹಿಸಲಾಗುತ್ತಿದೆ. ಇದು ಮತ್ತೊಂದು ಇಸಂ ಅಥವಾ ವಾದಕ್ಕೆ ಲಿಂಗತ್ವವಾದಕ್ಕೆ ಎಡೆಮಾಡಿಕೊಡುತ್ತಿದೆ. ಜಾತಿವಾದ, ಕೋಮುವಾದ, ಭಾಷಾವಾದಕ್ಕೆ ಲಿಂಗತ್ವವಾದವೂ ಸೇರಿಕೊಳ್ಳುತ್ತಿದೆ ."

ಭಾರತ ಹಿಂದೂ ಆಗಿರಬೇಕು ಎನ್ನುವುದರ ಬಗ್ಗೆ ಈ ಕೃತಿಯಲ್ಲಿ ಗೋಲ್ವಾಲ್‌ಕರ್ ಸ್ಫಟಿಕಸ್ಪಷ್ಟತೆಯಿಂದ ಪ್ರತಿಪಾದಿಸುತ್ತಾರೆ. ಹಿಂದೂ ಅಸ್ಮಿತೆಯನ್ನು ತೊರೆದು ಸೆಕ್ಯುಲರ್ ಅಸ್ಮಿತೆಯನ್ನು ಅಪ್ಪಿಕೊಳ್ಳುವ ಹಿಂದೂಗಳೂ ಸಹ ಹಿಂದೂ ಧರ್ಮದ ಶತ್ರುಗಳೇ ಎಂದು ಹೇಳುತ್ತಾರೆ. " ಸಮಸ್ತ ಹಿಂದೂ ಸಮಾಜ, ಐಕ್ಯತೆಯನ್ನು ಸಾಧಿಸಿದ ಹಿಂದೂ ಸಮಾಜ, ಇದನ್ನು ಸಾಧಿಸುವುದೇ ನಮ್ಮೆಲ್ಲರ ಒಂದಂಶದ ಭಕ್ತಿಯಿಂದ ಕೂಡಿದ ಗುರಿಯಾಗಬೇಕು. ಜಾತಿ, ಪಂಥ, ಭಾಷೆ, ಪ್ರಾಂತ್ಯ ಅಥವಾ ಪಕ್ಷ ಈ ಯಾವುದೇ ವಿಚಾರಗಳು ನಮ್ಮ ಭಕ್ತಿ ಮತ್ತು ಬದ್ಧತೆಗೆ ಅಡ್ಡಿಯಾಗಬಾರದು. ಭಕ್ತಿಯ ಸಾಕಾರ ಮೂರ್ತಿಯಾದ ರಾಮನನ್ನು ಗೌರವಿಸದೆ ಇರುವವರು, ಇದಕ್ಕೆ ಅಡ್ಡಿ ಮಾಡುವವರು ಹತ್ತುಲಕ್ಷ ಪಟ್ಟು ಹೆಚ್ಚಿನ ಶತ್ರು ಎಂದು ಭಾವಿಸಬೇಕು. ಅವರು ನಮಗೆ ಎಷ್ಟೇ ಹತ್ತಿರದವರಾಗಿದ್ದರೂ ನಮ್ಮ ನಿಲುವು ಇದೇ ಆಗಿರಬೇಕು."

**ಎಸ್/ಎಸ್‌ಟಿ/ಒಬಿಸಿ ಮೀಸಲಾತಿಗೆ ವಿರೋಧ**

"ಜಾತಿ ಮತ್ತು ಕುಲಗಳ ಆಧಾರದ ಮೇಲೆ ಗುಂಪುಗಳನ್ನು ವರ್ಗೀಕರಿಸುವ ನೀತಿಗೆ ನಾವು ಇತಿಶ್ರೀ ಹಾಡಬೇಕು. ಹಾಗೆಯೇ ಸೇವಾ ಕ್ಷೇತ್ರದಲ್ಲಿ ವಿಶೇಷ ಹಕ್ಕು ಮತ್ತು ಸವಲತ್ತುಗಳಿಗಾಗಿ ಆಗ್ರಹಿಸುವುದು, ಹಣಕಾಸು ನೆರವು ಕೋರುವುದು, ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಕೋರುವುದು ಇವೆಲ್ಲದಕ್ಕೂ ಅಂತ್ಯ ಹಾಡಬೇಕು. ಅಲ್ಪಸಂಖ್ಯಾತರು ಮತ್ತು ಸಮುದಾಯಗಳು ಎಂಬ ಪರಿಕಲ್ಪನೆ ಮತ್ತು ಚಿಂತನೆಯನ್ನೇ ಸಂಪೂರ್ಣವಾಗಿ ಕೈಬಿಡಬೇಕು " -ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-10

**ಹಿಂದಿ ಅಥವಾ ಸಂಸ್ಕೃತ ಭಾರತದ ಅಧಿಕೃತ ರಾಜಭಾಷೆಯಾಗಬೇಕು**

ಹಿಂದಿ ಅಥವಾ ಸಂಸ್ಕೃತವನ್ನು ಭಾರತದ ಏಕೈಕ ಅಧಿಕೃತ ರಾಜಭಾಷೆಯನ್ನಾಗಿ ಘೋಷಿಸಲು ಗೋಲ್ವಾಲ್‌ಕರ್ ಆಗ್ರಹಿಸಿದ್ದರು. " ಸಂಸ್ಕೃತ ಆ ಸ್ಥಾನವನ್ನು ಆಕ್ರಮಿಸುವವರೆಗೂ, ನಾವು ಸಂಸ್ಕೃತವನ್ನೇ ಆಧರಿಸಿರುವ ಹಿಂದಿ ಭಾಷೆಯನ್ನು ಅಧಿಕೃತ ರಾಜಭಾಷೆ ಎಂದು ಪರಿಗಣಿಸುವುದು ಅನುಕೂಲಕರ. ಹಿಂದಿ ಸಾಮ್ರಾಜ್ಯವಾದ ಅಥವಾ ಉತ್ತರದ ಅಧಿಪತ್ಯ ಮುಂತಾದ ಘೋಷಣೆಗಳಿಗೆ ಮಣಿದು ಇಲ್ಲಿ ನಿರ್ಲಕ್ಷ್ಯ ಮಾಡಬಾರದು " - ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-10

**ಪ್ರತ್ಯೇಕ ತಮಿಳು ಸಂಸ್ಕೃತಿಗೆ ವಿರೋಧ- ತಮಿಳು ಮತ್ತು ಹಿಂದೂ ಸಮೀಕರಣ**

ಗೋಲ್ವಾಲ್‌ಕರ್ ತಮಿಳು ಭಾಷೆಯನ್ನು ವಿಶಿಷ್ಟವಾದ ಭಾಷೆ ಅಥವಾ ಸಂಸ್ಕೃತಿ ಎಂದು ಒಪ್ಪಿಕೊಳ್ಳಲೇ ಇಲ್ಲ. " ಇತ್ತೀಚೆಗೆ ನಾವು ತಮಿಳಿನ ಬಗ್ಗೆ ಹೆಚ್ಚು ವಾದವಿವಾದಗಳನ್ನು ಕೇಳುತ್ತಿದ್ದೇವೆ. ಕೆಲವು ತಮಿಳು ಭಾಷಾ ಪ್ರತಿಪಾದಕರು ತಮಿಳನ್ನು ವಿಶಿಷ್ಟವಾದ ಭಾಷೆ ಎಂದು ಪರಿಗಣಿಸಿ ತಮಿಳು ಭಾಷೆಗೆ ತನ್ನದೇ ಆದ ಸಂಸ್ಕೃತಿ ಇರುವುದಾಗಿ ಹೇಳುತ್ತಿದ್ದಾರೆ. ಅವರು ವೇದಗಳಲ್ಲಿನ ನಂಬಿಕೆಯನ್ನು ನಿರಾಕರಿಸುತ್ತಿದ್ದಾರೆ. ತಿರುಕ್ಕುರಲ್ ತಮ್ಮ ವಿಶಿಷ್ಟ ಗ್ರಂಥ ಎಂದು ಹೇಳುತ್ತಿದ್ದಾರೆ. ಮಹಾಭಾರತದಂತೆಯೇ ತಿರುಕ್ಕುರಳ್ ಒಂದು ಹಿಂದೂ ಗ್ರಂಥ. ಅದು ಪರಿಶುದ್ಧ ಹಿಂದೂ ಭಾಷೆಯಲ್ಲಿ ಹಿಂದೂ ಚಿಂತನೆಗಳನ್ನೇ ಒಳಗೊಂಡಿದೆ " -ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-10

**ಆಂತರಿಕ ಅಪಾಯ : ಅಲ್ಪಸಂಖ್ಯಾತ ಅಸ್ಮಿತೆಗಳು ಮತ್ತು ಪರಿವರ್ತಕ ಸಿದ್ಧಾಂತಗಳು**

ಅಲ್ಪಸಂಖ್ಯಾತರ ( ಮುಸ್ಲಿಮರು ಮತ್ತು ಕ್ರೈಸ್ತರು ) ಧಾರ್ಮಿಕ ನಂಬಿಕೆಗಳನ್ನು ಮತ್ತು ಕ್ರಾಂತಿಕಾರಿ ಕಾರ್ಯಕರ್ತರನ್ನು (ಕಮ್ಯುನಿಸ್ಟರು) ಗೋಲ್ವಾಲ್‌ಕರ್ ಆಂತರಿಕವಾಗಿ ಅಪಾಯಕಾರಿ ಶಕ್ತಿಗಳು ಎಂದೇ ಗೋಲ್ವಾಲ್‌ಕರ್ ತಮ್ಮ -ಚಿಂತನೆಗಳ ಗೊಂಚಲು ಕೃತಿಯಲ್ಲಿ ಗುರುತಿಸುತ್ತಾರೆ.

**ಹಿಂದೂ-ಮುಸ್ಲಿಂ ಐಕ್ಯತೆ = ರಾಜದ್ರೋಹ**

ಹಿಂದೂ ಮುಸ್ಲಿಂ ಐಕ್ಯತೆಯನ್ನು ಗೋಲ್ವಾಲ್‌ಕರ್ ರಾಜದ್ರೋಹ ಎಂದೇ ಪರಿಗಣಿಸುತ್ತಾರೆ. 1947ರ ಸಂದರ್ಭದಲ್ಲಿ ಭಾರತ ಬ್ರಿಟೀಷ್ ಆಳ್ವಿಕೆಯಿಂದ ವಿಮೋಚನೆ ಗಳಿಸಿತು ಎನ್ನುವುದಕ್ಕಿಂತಲೂ ಅದು ಮುಸ್ಲಿಮರ ಕೈಯ್ಯಲ್ಲಿ ಸೋಲು ಅನುಭವಿಸಿದ ಘಳಿಗೆ ಎಂದೇ ಗೋಲ್ವಾಲ್‌ಕರ್ ಭಾವಿಸುತ್ತಾರೆ. " ಹಿಂದೂ ಮುಸ್ಲಿಂ ಐಕ್ಯತೆ ಇಲ್ಲದೆ ಸ್ವರಾಜ್ ಸಾಧ್ಯವಿಲ್ಲ ಎಂದು

# ಲೇಖನ

ಘೋಷಿಸಿದವರು ನಮ್ಮ ಸಮಾಜದ ಮೇಲೆ ದೊಡ್ಡ ರಾಜದ್ರೋಹ ಎಸಗಿದ್ದಾರೆ, ಇದರ ನೇರ ಪರಿಣಾಮ ಎಂದರೆ ಹಿಂದೂಗಳ ಮುಸ್ಲಿಮರ ವಿರುದ್ಧ 1947ರಲ್ಲಿ ಸೋಲು ಅನುಭವಿಸಬೇಕಾಯಿತು ” ಎಂದು ಹೇಳುತ್ತಾರೆ. -ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-12

**ಭಾರತದ ಸಂವಿಧಾನವನ್ನು ಭಾರತೀಯ ಅಲ್ಲ ಎಂದು ಲೇವಡಿ ಮಾಡಿದ್ದರು**

“ಭಾರತದ ಸಂವಿಧಾನ ಒಂದು ಕ್ಲಿಷ್ಟಕರವಾದ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳ ವಿವಿಧ ಸಂವಿಧಾನಗಳಿಂದ ಆಯ್ದ ಭಾಗಗಳಿಂದ ವೈವಿಧ್ಯಮಯವಾಗಿ ಕಾಣುವ ಒಂದು ಗ್ರಂಥವಾಗಿದೆ. ಇದರಲ್ಲಿ ನಮ್ಮ ಸ್ವಂತದ್ದು ಎನ್ನುವುದು ಏನೂ ಇಲ್ಲ. ನಮ್ಮ ರಾಷ್ಟ್ರೀಯ ಧ್ಯೇಯ ಏನು, ನಮ್ಮ ಜೀವನದ ಉದ್ದೇಶ ಏನು ಎನ್ನುವುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳಲ್ಲಿ ಒಂದೇ ಒಂದು ಉಲ್ಲೇಖ ಇರುವುದೇ? ಇಲ್ಲ. ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಯಿಂದ ಕೆಲವು ನೀತಿಗಳು, ಲೀಗ್ ಆಫ್ ನೇಷನ್ಸ್ ಒಡಂಬಡಿಕೆಯಿಂದ ಕೆಲವು ನಿಯಮಗಳು ಮತ್ತು ಅಮೆರಿಕ ಹಾಗೂ ಬ್ರಿಟನ್ನಿನ ಸಂವಿಧಾನಗಳಿಂದ ಆಯ್ದ ಕೆಲವು ಭಾಗಗಳನ್ನು ಒಟ್ಟುಗೂಡಿಸಿ ಒಂದು ಸಂವಿಧಾನವನ್ನು ಸಿದ್ಧಪಡಿಸಲಾಗಿದೆ. ಲೋಕಮಾನ್ಯರ ಪರಂಪರೆ ಎಂಬ ತಮ್ಮ ಕೃತಿಯಲ್ಲಿ ತಿಯೋಡರ್ ಶೇ ಹೀಗೆ ಹೇಳುತ್ತಾರೆ ‘ಸಂವಿಧಾನ ಪೀಠಿಕೆಯಿಂದ ಸ್ವರಾಜ್, ಧರ್ಮರಾಜ್ಯ ಮತ್ತು ಪ್ರಭುತ್ವದ ಧ್ಯೇಯ ಹೊಂದಿದ, ಜೀವನದ ಧ್ಯೇಯ ಬಿಂಬಿಸುವ ಸಮಗ್ರತೆಯ ಧ್ಯೇಯ ಇಲ್ಲಿ ಕಾಣುವುದಿಲ್ಲ. ಅಂದರೆ ಭಾರತದ ಸಂವಿಧಾನದಲ್ಲಿ ಭಾರತೀಯ ಚಿಂತನೆ, ಪರಿಕಲ್ಪನೆಗಳಿಗೆ ಮತ್ತು ರಾಜಕೀಯ ತತ್ವಶಾಸ್ತ್ರಗಳಿಗೆ ಅವಕಾಶವೇ ದೊರೆತಿಲ್ಲ ”-ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 3-14

ಭಾರತೀಯ ಪರಿಕಲ್ಪನೆಗಳು ಎಂದರೆ ಗೋಲ್ವಾಲ್‌ಕರ್ ಹೇಗೆ ಅರ್ಥೈಸುತ್ತಾರೆ? ಅವರ ಅರ್ಥದಲ್ಲಿ ಅದು ಮನುಸ್ಮøತಿಯೇ ಆಗಿದೆ. (ಅಂಬೇಡ್ಕರ್ ಮನುಸ್ಮøತಿಯನ್ನು ಶೋಷಿತ ದಮನಿತ ಜಾತಿಗಳು ಮತ್ತು ಮಹಿಳೆಯರ ಗುಲಾಮಗಿರಿಯ ಒಂದು ಗ್ರಂಥ ಎಂದು ಭಾವಿಸಿದ್ದರು). 1949ರ ನವಂಬರ್ 26ರಂದು ಭಾರತದ ಸೆಕ್ಯುಲರ್ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಅಂಗೀಕರಿಸಿದ ನಂತರ ಆರೆಸ್ಸೆಸ್‌ನ ಆಂಗ್ಲ ಮುಖವಾಣಿ ಪತ್ರಿಕೆ ಆರ್ಗನೈಸರ್ ನವಂಬರ್ 30ರ ಸಂಪಾದಕೀಯದಲ್ಲಿ ಹೀಗೆ ಆರೋಪಿಸಿತ್ತು : “ಆದರೆ ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ಸಾಂವಿಧಾನಿಕ ಬೆಳವಣಿಗೆಗಳ ವೈಶಿಷ್ಟ್ಯಗಳು ಪ್ರಸ್ತಾಪವಾಗಿಯೇ ಇಲ್ಲ. ಸ್ಪಾರ್ಟಾದ ಲಿಕರ್ಗಸ್ ಅಥವಾ ಪರ್ಷಿಯಾದ ಸೋಲೋನ್‌ಗಿಂತಲೂ ಮುನ್ನವೇ ಭಾರತದಲ್ಲಿ ಮನುಸ್ಮøತಿಯ ನಿಯಮಗಳು ರಚಿತವಾಗಿದ್ದವು. ಈ ದಿನದವರೆಗೂ ಮನುಸ್ಮøತಿಯಲ್ಲಿ ದಾಖಲಿಸಲಾಗಿರುವ ನಿಯಮಗಳು ವಿಶ್ವಾದ್ಯಂತ ಪ್ರಶಂಸೆ ಗಳಿಸಿರುವುದೇ ಅಲ್ಲದೆ ಏಕಾಏಕಿ ಬದ್ಧತೆ ಮತ್ತು ಸಮರ್ಪಣೆಯ ಭಾವವನ್ನು ಸೃಷ್ಟಿಸುತ್ತವೆ. ಆದರೆ ನಮ್ಮ ಸಂವಿಧಾನದ ಪಂಡಿತರಿಗೆ ಇದು ಅರ್ಥಹೀನ ಎನಿಸುತ್ತದೆ”.

**ತ್ರಿವರ್ಣ ಧ್ವಜವನ್ನು ಗೋಲ್ವಾಲ್‌ಕರ್ ಲೇವಡಿ ಮಾಡಿದ್ದರು**

“ ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೂ ಸಹ ಮೂರು ಪಟ್ಟಿಗಳು ಆಕರ್ಷಣೀಯವಾಗಿ ಕಂಡಿವೆ. ಹಾಗಾಗಿ ಕಾಂಗ್ರೆಸ್ ಇದನ್ನು ಆಯ್ಕೆ ಮಾಡಿಕೊಂಡಿದೆ. ನಂತರ ಇದನ್ನೇ ವಿಭಿನ್ನ ಸಮುದಾಯಗಳ ಐಕ್ಯತೆಯ ಸಂಕೇತ ಎಂದು ಬಿಂಬಿಸಲಾಯಿತು. ಕೇಸರಿ ಬಣ್ಣ ಹಿಂದೂಗಳನ್ನು, ಹಸಿರು ಮುಸಲ್ಮಾನರನ್ನು ಮತ್ತು ಬಿಳಿಯ ಬಣ್ಣ ಇತರ ಎಲ್ಲ ಸಮುದಾಯಗಳನ್ನೂ ಪ್ರತಿನಿಧಿಸುತ್ತದೆ ಎಂದು ಬಿಂಬಿಸಲಾಯಿತು. ಹಿಂದೂಯೇತರ ಸಮುದಾಯಗಳ ಪೈಕಿ ಮುಸಲ್ಮಾನರನ್ನು ವಿಶೇಷವಾಗಿ ಹೆಸರಿಸಿದ ಉದ್ದೇಶ ಪ್ರತ್ಯೇಕ ತಮಿಳು ಸಂಸ್ಕøತಿಗೆ ವಿರೋಧ- ತಮಿಳು ಮತ್ತು ಹಿಂದೂ ಸಮೀಕರಣ ಗೋಲ್ವಾಲ್‌ಕರ್ ತಮಿಳು ಭಾಷೆಯನ್ನು ವಿಶಿಷ್ಟವಾದ ಭಾಷೆ ಅಥವಾ ಸಂಸ್ಕøತಿ ಎಂದು ಒಪ್ಪಿಕೊಳ್ಳಲೇ ಇಲ್ಲ. “ ಇತ್ತೀಚೆಗೆ ನಾವು ತಮಿಳಿನ ಬಗ್ಗೆ ಹೆಚ್ಚು ವಾದವಿವಾದಗಳನ್ನು ಕೇಳುತ್ತಿದ್ದೇವೆ. ಕೆಲವು ತಮಿಳು ಭಾಷಾ ಪ್ರತಿಪಾದಕರು ತಮಿಳನ್ನು ವಿಶಿಷ್ಟವಾದ ಭಾಷೆ ಎಂದು ಪರಿಗಣಿಸಿ ತಮಿಳು ಭಾಷೆಗೆ ತನ್ನದೇ ಆದ ಸಂಸ್ಕøತಿ ಇರುವುದಾಗಿ ಹೇಳುತ್ತಿದ್ದಾರೆ. ಅವರು ವೇದಗಳಲ್ಲಿನ ನಂಬಿಕೆಯನ್ನು ನಿರಾಕರಿಸುತ್ತಿದ್ದಾರೆ. ತಿರುಕ್ಕುರಲ್ ತಮ್ಮ ವಿಶಿಷ್ಟ ಗ್ರಂಥ ಎಂದು ಹೇಳುತ್ತಿದ್ದಾರೆ. ಮಹಾಭಾರತದಂತೆಯೇ ತಿರುಕ್ಕುರಳ್ ಒಂದು ಹಿಂದೂ ಗ್ರಂಥ. ಅದು ಪರಿಶುದ್ಧ ಹಿಂದೂ ಭಾಷೆಯಲ್ಲಿ ಹಿಂದೂ ಚಿಂತನೆಗಳನ್ನೇ ಒಳಗೊಂಡಿದೆ ” -ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-10

**ಆಂತರಿಕ ಅಪಾಯ : ಅಲ್ಪಸಂಖ್ಯಾತ ಅಸ್ಮಿತೆಗಳು ಮತ್ತು ಪರಿವರ್ತಕ ಸಿದ್ಧಾಂತಗಳು**

ಅಲ್ಪಸಂಖ್ಯಾತರ (ಮುಸ್ಲಿಮರು ಮತ್ತು ಕ್ರೈಸ್ತರು) ಧಾರ್ಮಿಕ ನಂಬಿಕೆಗಳನ್ನು ಮತ್ತು ಕ್ರಾಂತಿಕಾರಿ ಕಾರ್ಯಕರ್ತರನ್ನು (ಕಮ್ಯುನಿಸ್ಟರು) ಗೋಲ್ವಾಲ್‌ಕರ್ ಆಂತರಿಕವಾಗಿ ಅಪಾಯಕಾರಿ ಶಕ್ತಿಗಳು ಎಂದೇ ಗೋಲ್ವಾಲ್‌ಕರ್ ತಮ್ಮ -ಚಿಂತನೆಗಳ ಗೊಂಚಲು ಕೃತಿಯಲ್ಲಿ ಗುರುತಿಸುತ್ತಾರೆ.

**ಹಿಂದೂ-ಮುಸ್ಲಿಂ ಐಕ್ಯತೆ = ರಾಜದ್ರೋಹ**

ಹಿಂದೂ ಮುಸ್ಲಿಂ ಐಕ್ಯತೆಯನ್ನು ಗೋಲ್ವಾಲ್‌ಕರ್ ರಾಜದ್ರೋಹ ಎಂದೇ ಪರಿಗಣಿಸುತ್ತಾರೆ. 1947ರ ಸಂದರ್ಭದಲ್ಲಿ ಭಾರತ ಬ್ರಿಟೀಷ್ ಆಳ್ವಿಕೆಯಿಂದ ವಿಮೋಚನೆ ಗಳಿಸಿತು ಎನ್ನುವುದಕ್ಕಿಂತಲೂ ಅದು ಮುಸ್ಲಿಮರ ಕೈಯ್ಯಲ್ಲಿ ಸೋಲು ಅನುಭವಿಸಿದ ಘಳಿಗೆ ಎಂದೇ ಗೋಲ್ವಾಲ್‌ಕರ್ ಭಾವಿಸುತ್ತಾರೆ. “ ಹಿಂದೂ ಮುಸ್ಲಿಂ ಐಕ್ಯತೆ ಇಲ್ಲದೆ ಸ್ವರಾಜ್ ಸಾಧ್ಯವಿಲ್ಲ ಎಂದು ಘೋಷಿಸಿದವರು ನಮ್ಮ ಸಮಾಜದ ಮೇಲೆ ದೊಡ್ಡ ರಾಜದ್ರೋಹ ಎಸಗಿದ್ದಾರೆ, ಇದರ ನೇರ ಪರಿಣಾಮ ಎಂದರೆ ಹಿಂದೂಗಳ ಮುಸ್ಲಿಮರ ವಿರುದ್ಧ 1947ರಲ್ಲಿ ಸೋಲು ಅನುಭವಿಸಬೇಕಾಯಿತು ” ಎಂದು ಹೇಳುತ್ತಾರೆ. -ಚಿಂತನೆಗಳ ಗೊಂಚಲು – ಗೋಲ್ವಾಲ್‌ಕರ್ ಭಾಗ 2-12

**ಭಾರತದ ಸಂವಿಧಾನವನ್ನು ಭಾರತೀಯ ಅಲ್ಲ ಎಂದು ಲೇವಡಿ ಮಾಡಿದ್ದರು**

“ಭಾರತದ ಸಂವಿಧಾನ ಒಂದು ಕ್ಲಿಷ್ಟಕರವಾದ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳ ವಿವಿಧ ಸಂವಿಧಾನಗಳಿಂದ ಆಯ್ದ ಭಾಗಗಳಿಂದ ವೈವಿಧ್ಯಮಯವಾಗಿ ಕಾಣುವ ಒಂದು ಗ್ರಂಥವಾಗಿದೆ. ಇದರಲ್ಲಿ ನಮ್ಮ ಸ್ವಂತದ್ದು ಎನ್ನುವುದು ಏನೂ ಇಲ್ಲ.

## ಲೇಖನ

ನಮ್ಮ ರಾಷ್ಟ್ರೀಯ ಧ್ಯೇಯ ಏನು, ನಮ್ಮ ಜೀವನದ ಉದ್ದೇಶ ಏನು ಎನ್ನುವುದರ ಬಗ್ಗೆ ಮಾರ್ಗದರ್ಶಿ ಸೂತ್ರಗಳಲ್ಲಿ ಒಂದೇ ಒಂದು ಉಲ್ಲೇಖ ಇರುವುದೇ? ಇಲ್ಲ. ಸಂಯುಕ್ತ ರಾಷ್ಟ್ರಗಳ ಒಡಂಬಡಿಕೆಯಿಂದ ಕೆಲವು ನೀತಿಗಳು, ಲೀಗ್ ಆಫ್ ನೇಷನ್ಸ್ ಒಡಂಬಡಿಕೆಯಿಂದ ಕೆಲವು ನಿಯಮಗಳು ಮತ್ತು ಅಮೆರಿಕ ಹಾಗೂ ಬ್ರಿಟನ್ನಿನ ಸಂವಿಧಾನಗಳಿಂದ ಆಯ್ದ ಕೆಲವು ಭಾಗಗಳನ್ನು ಒಟ್ಟುಗೂಡಿಸಿ ಒಂದು ಸಂವಿಧಾನವನ್ನು ಸಿದ್ಧಪಡಿಸಲಾಗಿದೆ. ಲೋಕಮಾನ್ಯರ ಪರಂಪರೆ ಎಂಬ ತಮ್ಮ ಕೃತಿಯಲ್ಲಿ ತಿಯೋಡರ್ ಶೇ ಹೀಗೆ ಹೇಳುತ್ತಾರೆ ' ಸಂವಿಧಾನ ಪೀಠಿಕೆಯಿಂದ ಸ್ವರಾಜ್, ಧರ್ಮರಾಜ್ಯ ಮತ್ತು ಪ್ರಭುತ್ವದ ಧ್ಯೇಯ ಹೊಂದಿದ, ಜೀವನದ ಧ್ಯೇಯ ಬಿಂಬಿಸುವ ಸಮಗ್ರತೆಯ ಧ್ಯೇಯ ಇಲ್ಲಿ ಕಾಣುವುದಿಲ್ಲ. ಅಂದರೆ ಭಾರತದ ಸಂವಿಧಾನದಲ್ಲಿ ಭಾರತೀಯ ಚಿಂತನೆ, ಪರಿಕಲ್ಪನೆಗಳಿಗೆ ಮತ್ತು ರಾಜಕೀಯ ತತ್ವಶಾಸ್ತ್ರಗಳಿಗೆ ಅವಕಾಶವೇ ದೊರೆತಿಲ್ಲ ' " -ಚಿಂತನೆಗಳ ಗೊಂಚಲು – ಗೋಲ್ವಾಲ್ಕರ್ ಭಾಗ 3-14

ಭಾರತೀಯ ಪರಿಕಲ್ಪನೆಗಳು ಎಂದರೆ ಗೋಲ್ವಾಲ್ಕರ್ ಹೇಗೆ ಅರ್ಥೈಸುತ್ತಾರೆ ? ಅವರ ಅರ್ಥದಲ್ಲಿ ಅದು ಮನುಸ್ಮøತಿಯೇ ಆಗಿದೆ. ( ಅಂಬೇಡ್ಕರ್ ಮನುಸ್ಮøತಿಯನ್ನು ಶೋಷಿತ ದಮನಿತ ಜಾತಿಗಳು ಮತ್ತು ಮಹಿಳೆಯರ ಗುಲಾಮಗಿರಿಯ ಒಂದು ಗ್ರಂಥ ಎಂದು ಭಾವಿಸಿದ್ದರು). 1949ರ ನವಂಬರ್ 26ರಂದು ಭಾರತದ ಸೆಕ್ಯುಲರ್ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಅಂಗೀಕರಿಸಿದ ನಂತರ ಆರೆಸ್ಸೆಸ್‌ನ ಆಂಗ್ಲ ಮುಖವಾಣಿ ಪತ್ರಿಕೆ ಆರ್ಗನೈಸರ್ ನವಂಬರ್ 30ರ ಸಂಪಾದಕೀಯದಲ್ಲಿ ಹೀಗೆ ಆರೋಪಿಸಿತ್ತು :

" ಆದರೆ ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ಸಾಂವಿಧಾನಿಕ ಬೆಳವಣಿಗೆಗಳ ವೈಶಿಷ್ಟ್ಯಗಳು ಪ್ರಸ್ತಾಪವಾಗಿಯೇ ಇಲ್ಲ. ಸ್ಪಾರ್ಟಾದ ಲಿಕರ್ಗಸ್ ಅಥವಾ ಪರ್ಷಿಯಾದ ಸೋಲೋನ್‌ಗಿಂತಲೂ ಮುನ್ನವೇ ಭಾರತದಲ್ಲಿ ಮನುಸ್ಮøತಿಯ ನಿಯಮಗಳು ರಚಿತವಾಗಿದ್ದವು. ಈ ದಿನದವರೆಗೂ ಮನುಸ್ಮøತಿಯಲ್ಲಿ ದಾಖಲಿಸಲಾಗಿರುವ ನಿಯಮಗಳು ವಿಶ್ವಾದ್ಯಂತ ಪ್ರಶಂಸೆ ಗಳಿಸಿರುವುದೇ ಅಲ್ಲದೆ ಏಕಾಏಕಿ ಬದ್ಧತೆ ಮತ್ತು ಸಮರ್ಪಣೆಯ ಭಾವವನ್ನು ಸೃಷ್ಟಿಸುತ್ತವೆ. ಆದರೆ ನಮ್ಮ ಸಂವಿಧಾನದ ಪಂಡಿತರಿಗೆ ಇದು ಅರ್ಥಹೀನ ಎನಿಸುತ್ತದೆ".

### ತ್ರಿವರ್ಣ ಧ್ವಜವನ್ನು ಗೋಲ್ವಾಲ್ಕರ್ ಲೇವಡಿ ಮಾಡಿದ್ದರು

"ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೂ ಸಹ ಮೂರು ಪಟ್ಟಿಗಳು ಆಕರ್ಷಣೀಯವಾಗಿ ಕಂಡಿವೆ. ಹಾಗಾಗಿ ಕಾಂಗ್ರೆಸ್ ಇದನ್ನು ಆಯ್ಕೆ ಮಾಡಿಕೊಂಡಿದೆ. ನಂತರ ಇದನ್ನೇ ವಿಭಿನ್ನ ಸಮುದಾಯಗಳ ಐಕ್ಯತೆಯ ಸಂಕೇತ ಎಂದು ಬಿಂಬಿಸಲಾಯಿತು. ಕೇಸರಿ ಬಣ್ಣ ಹಿಂದೂಗಳನ್ನು, ಹಸಿರು ಮುಸಲ್ಮಾನರನ್ನು ಮತ್ತು ಬಿಳಿಯ ಬಣ್ಣ ಇತರ ಎಲ್ಲ ಸಮುದಾಯಗಳನ್ನೂ ಪ್ರತಿನಿಧಿಸುತ್ತದೆ ಎಂದು ಬಿಂಬಿಸಲಾಯಿತು. ಹಿಂದೂಯೇತರ ಸಮುದಾಯಗಳ ಪೈಕಿ ಮುಸಲ್ಮಾನರನ್ನು ವಿಶೇಷವಾಗಿ ಹೆಸರಿಸಿದ ಉದ್ದೇಶ ಏನೆಂದರೆ ಬಹುತೇಕ ನಾಯಕರ ಅಭಿಪ್ರಾಯದಲ್ಲಿ ಮುಸಲ್ಮಾನರು ಪ್ರಧಾನವಾಗಿ ಕಂಡಿದ್ದರು ಮತ್ತು ಮುಸಲ್ಮಾನರನ್ನು ಹೆಸರಿಸದಿದ್ದರೆ ನಮ್ಮ ರಾಷ್ಟ್ರೀಯತೆ ಪರಿಪೂರ್ಣವಾಗುವುದಿಲ್ಲ ಎಂಬ ಅಭಿಪ್ರಾಯ ಮೂಡಿತ್ತು. ಕೆಲವರು ಇದನ್ನು ಕೋಮುವಾದಿ ಧೋರಣೆ ಎಂದು ಆಕ್ಷೇಪ ವ್ಯಕ್ತಪಡಿಸಿದಾಗ ವ್ಯಾಖ್ಯಾನವನ್ನೇ ಬದಲಿಸಿ, ಕೇಸರಿ ತ್ಯಾಗ ಬಲಿದಾನವನ್ನು ಪ್ರತಿನಿಧಿಸುತ್ತದೆ, ಬಿಳಿಯ ಬಣ್ಣ ಪರಿಶುದ್ಧತೆಯನ್ನು ಪ್ರತಿನಿಧಿಸುತ್ತದೆ ಮತ್ತು ಹಸಿರು ಶಾಂತಿಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಯಿತು. ಈ ವ್ಯಾಖ್ಯಾನಗಳನ್ನು ಆ ದಿನಗಳಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸಮಿತಿ ಸಭೆಗಳಲ್ಲಿ ಚರ್ಚೆಗೊಳಪಡಿಸಲಾಯಿತು. ಇದನ್ನು ಪರಿಶುದ್ಧವಾದ, ಆರೋಗ್ಯಕರವಾದ ರಾಷ್ಟ್ರೀಯ ದೃಷ್ಟಿಕೋನ ಎಂದು ಯಾರು ಹೇಳಲು ಸಾಧ್ಯ ?"- ಗೋಲ್ವಾಲ್ಕರ್ ಚಿಂತನೆಗಳ ಗೊಂಚಲು ಭಾಗ 3 19.

### ಒಕ್ಕೂಟ ವ್ಯವಸ್ಥೆ, ರಾಜ್ಯಗಳ ಹಕ್ಕುಗಳು ಮತ್ತು ಪಂಚಾಯತ್ ಚುನಾವಣೆಗಳಿಗೆ ವಿರೋಧ

"ನಾವು ಒಂದು ದೇಶ, ಒಂದು ಸಮಾಜ ಮತ್ತು ಒಂದು ರಾಷ್ಟ್ರ. ಜೀವನ ಮೌಲ್ಯಗಳನ್ನು, ಸೆಕ್ಯುಲರ್ ಆಶಯಗಳು ಮತ್ತು ಆಸಕ್ತಿಗಳನ್ನು ಹೊಂದಿರುವ ಒಂದು ಸಮುದಾಯ ಆದ್ದರಿಂದ ಈ ದೇಶವನ್ನು ಏಕಾಧಿಕಾರದ ಮಾದರಿಯಲ್ಲಿ ಒಂದು ರಾಷ್ಟ್ರವನ್ನಾಗಿಯೇ ಆಳುವುದು ನಮ್ಮ ಆಶಯ. ಈಗಿರುವ ಒಕ್ಕೂಟ ವ್ಯವಸ್ಥೆ ಪ್ರತ್ಯೇಕತಾ ಭಾವನೆಗಳನ್ನು ಸೃಷ್ಟಿಸುತ್ತದೆ " -ಚಿಂತನೆಗಳ ಗೊಂಚಲು – ಗೋಲ್ವಾಲ್ಕರ್ ಭಾಗ 2-15

ಇದೇ ರೀತಿ ಗೋಲ್ವಾಲ್ಕರ್ ಸಂವಿಧಾನದ ತಿದ್ದುಪಡಿಯನ್ನೂ ಬಯಸಿದ್ದರು. " ಪಂಚಾಯತ್ ಚುನಾವಣೆಗಳು ಸರ್ವಾನುಮತದಿಂದ ನಡೆಯಬೇಕು ಅಥವಾ ಚುನಾವಣೆಗಳೇ ಇರಕೂಡದು " ಎಂದು ಹೇಳಿದ್ದರು. -ಚಿಂತನೆಗಳ ಗೊಂಚಲು – ಗೋಲ್ವಾಲ್ಕರ್ ಭಾಗ 2-15

ಮೋದಿ ಆಡಳಿತ, ಗೋಲ್ವಾಲ್ಕರ್ ಅವರ ಮೌಲ್ಯಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮುನ್ನಡೆಯುತ್ತಿದ್ದು ನಮ್ಮ ಪರಿಕಲ್ಪನೆಯ ಭಾರತವನ್ನು ಕಡೆಗಣಿಸುತ್ತಿದೆ. ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ನಿರ್ಲಕ್ಷಿಸುತ್ತಿದ್ದು, ಜಾತಿ, ಕುಲ, ನಂಬಿಕೆ, ಲಿಂಗತ್ವ ಇವೆಲ್ಲದರಿಂದಲೂ ಹೊರತಾದ ಸಮಾನ ಹಕ್ಕು ಮತ್ತು ಸ್ಥಾನಮಾನಗಳನ್ನು ನಿರಾಕರಿಸಲು ಯತ್ನಿಸುತ್ತಿದೆ. ಬದಲಾಗಿ ಮನುವಾದಿ ನಾಜಿ ಸರ್ವಾಧಿಕಾರಿ ಆಡಳಿತವನ್ನು ಸ್ಥಾಪಿಸಲು ಯತ್ನಿಸುತ್ತಿದೆ. ಭಾರತದ ಬಗ್ಗೆ ಗೋಲ್ವಾಲ್ಕರ್ ಅವರ ಕನಸುಗಳು ಭೀಕರವಾಗಿವೆ. ನಾವು ಇದನ್ನು ಅರ್ಥಮಾಡಿಕೊಳ್ಳಬೇಕಿದೆ, ಇದರ ವಿರುದ್ಧ ನಮ್ಮೆಲ್ಲಾ ಶಕ್ತಿಯನ್ನು ವ್ಯಯಿಸಿ ಹೋರಾಡಬೇಕಿದೆ.

**ಮೂಲ: ಲಿಬರೇಶನ್ ಮಾಸ ಪತ್ರಿಕೆ**
**ಅನುವಾದ: ನಾ ದಿವಾಕರ್**

## ಲೇಖನ

# ಕೊಡಗಿನ ರಕ್ಷಕರು

ಎಲ್ಲೆಲ್ಲೂ ಹಚ್ಚ-ಹಸಿರಿನಿನ ಕಂಗೊಳಿಸುತ್ತಾ, ಪ್ರಕೃತಿ ಮಾತೆಯ ಮಮತೆಯ ಮಡಿಲಲ್ಲಿ ಅರಳಿದ ಸುಂದರ ನಾಡು ಕೊಡಗು ಜಿಲ್ಲೆ. ಎಲ್ಲೆಲ್ಲೂ ಕಾನನದ ಸಿರಿ ವೈಭವ, ಬೆಟ್ಟಗುಡ್ಡಗಳ-ಹೋಲ್-ಝರಿಗಳ ಝುಳು-ಝುಳು ನಾದದ ನಡುವೆ ಪಕ್ಷಿಗಳ ಸುಮಧುರ ಕಲರವ. ಉದಾರ ಪ್ರಕೃತಿಯು ಅಪಾರ ಸಂಪತ್ತನ್ನು ನೀಡಿರುವ ಈ ನಾಡಿಗೆ ಅಪ್ಪಳಿಸಿ ಬಂದಿತು ಕೋವಿಡ್ - 19 ಎಂಬ ಸಾಂಕ್ರಾಮಿಕ ರೋಗ. ಇಡೀ ಕೊಡಗು ತತ್ತರಿಸಿ ಹೋಯಿತು. ಜನಜೀವನವೇ ಅಸ್ತವ್ಯಸ್ತವಾಯಿತು. ಬಡವರ ಜೀವನ ಶೋಷಣೀಯವಾಯಿತು.

ಆದರೆ ಇದಾವುದರ ಪರಿವೆಯೇ ಇಲ್ಲದೆ ಎಂದಿನಂತೆ ತಮ್ಮ ಜೀವನವನ್ನು ಶ್ರೀಮಂತರ ಏಳಿಗೆಗಾಗಿ ವ್ಯಯಿಸುತ್ತಾ, ತನ್ನ ಧನಿಯಾ ಸಂಪತ್ತಿಗೆ ಯಾವ ಧಕ್ಕೆಯಾಗದಂತೆ, ತನ್ನ ಶಕ್ತಿ ಮೀರಿ ದುಡಿದು ಕನಿಷ್ಠ ವೇತನವನ್ನು ಪಡೆಯದ ಧಣಿ ನೀಡಿದ ಭಿಕ್ಷೆಯನ್ನು ಪಡೆದು ಅದರಲ್ಲೇ ಸಂತೃಪ್ತಿಯನ್ನು ಕಂಡು ಪ್ರಪಂಚದ ಪರಿವೆಯೇ ಇಲ್ಲದೆ ಬದುಕುತ್ತಿದ್ದಾರೆ ಕೊಡಗಿನ ಫನಿಯರ್, ಎರವ ಜನಾಂಗದವರು. ಕಾಲಕ್ಕೆ ತಕ್ಕಂತೆ ಎಲ್ಲರು ತಮ್ಮ ಜೀವನ ಶೈಲಿ ಬದಲಾಯಿಸಿದರೆ, ಈ ಜನಾಂಗದವರು ಇಂದಿಗೂ ಶ್ರೀಮಂತರ ಜೀವನವನ್ನು ವ್ಯಯಿಸುತ್ತಾ, ತಮ್ಮ ಆಚಾರ-ವಿಚಾರ-ಸಂಸ್ಕೃತಿಯನ್ನು ಬಿಡದೆ ಜೀವನ ನಡೆಸುತ್ತಿದ್ದಾರೆ. ಎಷ್ಟೇ ಕಷ್ಟವಾದರೂ ಕಾಡು-ಮೇಡು ಇವರ ಪಾಲಿನ ದೇವರು. ಇಯವೇ ಕೊಡಗಿನ ಉಳಿವಿಗೆ ಕಾರಣವೂ ಕೂಡ ಎಂದರೆ ತಪ್ಪಿಲ್ಲ. ಕೋವಿಡ್ - 19 ಎಲ್ಲರ ಜೀವನಕ್ಕೂ ಬಾಡಿಸಿದೆರೆ ಈ ಜನಾಂಗದವರಿಗೆ ಮಾತ್ರ ಯಾವುದೇ ತೊಂದರೆ ಮಾಡಲಿಲ್ಲ ಎನ್ನುವುದು ಅಷ್ಟೇ ಸತ್ಯ. ಇದಕ್ಕೆ ಕಾರಣ ಅವರ ಆಹಾರ ಶೈಲಿ, ಜೀವನ ಪದ್ಧತಿ ಹಾಗು ಕಠಿಣ ಪರಿಶ್ರಮ. ಆದರೆ ಇವರ ಶ್ರಮಕ್ಕೆ ತಕ್ಕ ಪ್ರತಿಫಲವೂ ಇಂದಿನ ವರೆಗೂ ಸಿಕ್ಕಿಲ್ಲ. ಎಷ್ಟೇ ಶೋಷಣೆ ಅನುಭವಿಸಿದರು ಕೂಡ ಇವರಂತಹ ನಿಷ್ಠಾವಂತರು ಇನ್ನೊಬ್ಬರಿಲ್ಲ. ಆದರೆ ಮುಂದೊಂದು ದಿನ ಇವರು ತಮ್ಮ ಕೆನ್ನಾಲಿಗೆಯನ್ನು ಚಾಚಿ ತಕ್ತ ಕುಡಿಯಲಿ ಮುಂದಾಗುವ ಕಾಲ ದೂರವಿಲ್ಲ. ಆದ್ದರಿಂದ ಇವರನ್ನ ದುಡಿಸಿಕೊಳ್ಳುವ ಧಣಿಗಳು ಎಚ್ಚೆತ್ತರೆ ಉತ್ತಮ. ಏಕೆಂದರೆ ಕಾಲ ಚಲಿಸುತ್ತಲೇ ಇರುತ್ತದೆ.

**ಮೋಹನ್ ಎಂ.ಕೆ.**
**ಜಿಲ್ಲಾ ಕಾರ್ಯದರ್ಶಿ, ಎಐಸಿಸಿಟಿಯು ವಿರಾಜಪೇಟೆ**
**ಕೊಡಗು ಜಿಲ್ಲೆ**




**ಎಐಸಿಸಿಟಿಯು ಸಂಯೋಜಿತ ಬೀದಿ ವ್ಯಾಪಾರೀ ಸಂಘಟನೆಯ ಸದಸ್ಯರು ಕೊರೋನಾ ಕಾಲದಲ್ಲಿ ತಮ್ಮ ಜೀವನೋಪಾಯವನ್ನು ಉಳಿಸಲು ಮತ್ತು ಬೀದಿ ವ್ಯಾಪಾರಿಗಳ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸಿದರು**

## ವರದಿ ಬಿಡುಗಡೆ

# ಭತ್ತದ ಕಣಜದಿಂದ ಚೆಲ್ಲಿದ ರಕ್ತ

## ಶ್ರೀ । ದಾನಪ್ಪನ ಹತ್ಯೆ

ಕೊಪ್ಪಳ ಜಿಲ್ಲೆಯಾದ್ಯಂತ ದಲಿತರ ಮೇಲಿನ ಈ ರೀತಿಯ ದೌರ್ಜನ್ಯ ಮತ್ತು ಹತ್ಯೆಗಳು ಪದೇಪದೇ ನಡೆಯುತ್ತಿವೆ. ಒಂದೆಡೆ ಜಾತಿಯೆಂಬುದಿಲ್ಲ, ಮೀಸಲಾತಿ ತೆಗೆಯಬೇಕು ಇತ್ಯಾದಿ ಚರ್ಚೆಗಳು ನಡೆಯುತ್ತಿರುವ ಹೊತ್ತಿನಲ್ಲೇ ಜಾತಿ ದೌರ್ಜನ್ಯಗಳು ಎಗ್ಗಿಲ್ಲದೆ ನಡೆಯುತ್ತಿವೆ. ಸಾಂಕ್ರಾಮಿಕ ಕಾಲದಲ್ಲಿಯೂ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಲೇ ಇವೆ. ಪದೇ ಪದೇ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಿ ವರದಿಯಾಗುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿ ಮತ್ತೊಂದು ಅಮಾನುಷ ಘಟನೆ ವರದಿಯಾಗಿದ್ದು, ಅನ್ಯಜಾತಿಯ ಯುವತಿಯನ್ನು ಪ್ರೀತಿಸಿದ್ದಕ್ಕೆ ದಲಿತ ಯುವಕನನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಜೂನ್ 22 ರಾತ್ರಿ ಜರುಗಿದೆ.

ಬರಗೂರು ಗ್ರಾಮದ ಕುರುಬ ಸಮುದಾಯದ ಯುವತಿಯನ್ನು ಪ್ರೀತಿಸಿದ ಕಾರಣಕ್ಕಾಗಿ ದಲಿತ (ಮಾದಿಗ) ಸಮುದಾಯದ ಶ್ರೀ । ದಾನಪ್ಪ (23) ಎಂಬ ಯುವಕನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದ್ದು, ಈ ಕುರಿತು ಕಾರಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 7 ಜನರ ಮೇಲೆ ದಲಿತ ದೌರ್ಜನ್ಯ ತಡೆ ಕಾಯ್ದೆ ಸೇರಿದಂತೆ ವಿವಿಧ ಸೆಕ್ಷನ್‌ಗಳ ಅಡಿ ಎಫ್‌ಐಆರ್ ದಾಖಲಾಗಿದ್ದು ನಾಲ್ಕು ಜನರನ್ನು ಬಂಧಿಸಲಾಗಿದೆ.

**ಪ್ರಕರಣದ ಹಿನ್ನೆಲೆ**

ಬರಗೂರು ಗ್ರಾಮದ ಕುರುಬ ಸಮುದಾಯದ ಮರಿಬಸಪ್ಪನವರ ಎರಡನೇ ಮಗಳಾದ ಸುನೀತಾ (20) ಮತ್ತು ಮಾದಿಗ ಸಮುದಾಯದ ಕರಿ ಹನುಮಂತಪ್ಪನವರ ಎರಡನೇ ಮಗ ಶ್ರೀ । ದಾನಪ್ಪ (23) ಪರಸ್ಪರ ಪ್ರೀತಿಸುತ್ತಿದ್ದರು. ಈ ವಿಷಯ ಪೋಷಕರಿಗೆ ತಿಳಿದು ಹುಡುಗಿಯ ತಂದೆ ಮರಿಬಸಪ್ಪ ಈ ಹಿಂದೆಯೇ ಹುಡುಗ ದಾನಪ್ಪನನ್ನು ಕರೆದು ಜಾತಿನಿಂದನೆ ಮಾಡಿದ್ದಲ್ಲದೆ, ಹಲ್ಲೆ ನಡೆಸಿ ಹುಡುಗಿಯ ತಂಟೆಗೆ ಬರಬಾರದೆಂದು ತಾಕೀತು ಮಾಡಿದ್ದರು ಎಂದು ಹುಡುಗನ ತಂದೆ ಕರಿ ಹನುಮಂತಪ್ಪ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಮುಂದಿನ ವಾರ ಹುಡುಗಿಯ ಮದುವೆ ನಿಗದಿಯಾಗಿದ್ದು, ಹಾಗಿದ್ದರೂ ಆಕೆ ದಾನಪ್ಪನೊಡನೆ ಮಾತನಾಡುತ್ತಿದ್ದಳು ಎಂದು ಆಕೆಯ ತಂದೆ ಮರಿಬಸಪ್ಪ ಜೂನ್ 22 ರ ರಾತ್ರಿ ಮಾತನಾಡುವುದಾಗಿ ದಾನಪ್ಪನನ್ನು ಕರೆಸಿಕೊಂಡಿದ್ದಾರೆ. ತದನಂತರ ಆತನನ್ನು ಬೆದರಿಸಿ, ಹೊಲದಲ್ಲೆಲ್ಲ ಅಟ್ಟಾಡಿಸಿಕೊಂಡು ಹೊಡೆದು ತೀವ್ರವಾಗಿ ಹಲ್ಲೆ ಮಾಡಿ ಹುಡುಗನ ಎಡಗಾಲು ಮುರಿದು ಕೊಲೆಗೈದಿದ್ದಾರೆ.

ದಿನಾಂಕ 22/06/2021 ರಂದು ರಾತ್ರಿ ದಾನಪ್ಪ ಮತ್ತು ಆತನ ತಂದೆ ಕರಿಹನುಮಂತಪ್ಪ ಇವರುಗಳು ಮನೆಯಲ್ಲಿ ಮಾತನಾಡುತ್ತಾ ಕುಳಿತ್ತಿದ್ದ ಸಂದರ್ಭದಲ್ಲಿ,ಕುರುಬ ಸಮುದಾಯದ ಮರಿಬಸಪ್ಪ ಈತನು ದಾನಪ್ಪನನ್ನು ಕೆಲಸವಿದೆ ಬಾ ಎಂದು ಕರೆಯುತ್ತಾನೆ.ಹಾಗ ದಾನಪ್ಪನು ತಂದೆಗೆ ಹೇಳಿ ಅವರದು ಏನು ಕೆಲಸವಿದೆ ಕೇಳಿಬರುತ್ತೇನೆಂದು ಮನೆಯಿಂದ ಹೊರಹೋಗುತ್ತಾನೆ ಹೀಗೆ ಹೊರಹೋದ ಮಗ ವಾಪಸ್ ಬರುತ್ತಾನೆಂದು ರಾತ್ರಿ 12 ಗಂಟೆವರೆಗೆ ತಂದೆತಾಯಿಗಳು ಕಾಯುತ್ತಾ ಕೂಳಿತಿದ್ದರು. ಅವನು ಬಾರದಿದ್ದಾಗ ರಾತ್ರಿ ಎರಡು ಗಂಟೆಯವರೆಗೆ ಸಂಬಂಧಿಕರ ಜೊತೆಗೆ ಹುಡುಕಾಟ ನಡೆಸಿದ್ದಾರೆ ಆದರೆ ಆತ ಸಿಗಲೇ ಇದ್ದಾಗ, ಬೆಳಿಗ್ಗೆ ಹುಡುಕಿದರಾಯಿತು ಎಂದು ಮಲಗುತ್ತಾರೆ.

ಬೆಳಿಗ್ಗೆ 7.30 ರ ಸುಮಾರಿಗೆ ದಾನಪ್ಪ ಕೆಲಸ ಮಾಡುತ್ತಿದ್ದ ಮಾಲಿಕನಾದ ಯರಿಸ್ವಾಮಿ ತಂದಿ ಮಹಾದೇವಪ್ಪ ಈತನು ವಾಕಿಂಗ್ ಹೋಗಿದ್ದ ಸಂದರ್ಭದಲ್ಲಿ ದಾನಪ್ಪನ ಶವ ನೋಡಿ ಕೂಡಲೇ ಹುಡುಗನ ಮನೆಯವರಿಗೆ ನಿಮ್ಮ ಮಗ ಕೊಲೆಯಾಗಿ ಬಿದ್ದಿದ್ದಾನೆ ಎಂದು ತಿಳಿಸುತ್ತಾನೆ.

ಮನೆಯವರೆಲ್ಲ ಓಡಿ ಬಂದು ನೋಡಿದರೆ ದಾನಪ್ಪ ಕೊಲೆಯಾಗಿ ಬಿದ್ದಿರುತ್ತಾನೆ ಆತನ ಎದೆ,ಕುತ್ತಿಗೆ,ಹೊಟ್ಟೆಯ ಮೇಲೆಲ್ಲಾ ಗಾಯದ ಗುರುತುಗಳಿರುತ್ತವೆ ಹಾಗೂ ಎಡಗಾಲು ಮುರಿದಿರುತ್ತದೆ.ಇದನ್ನು ಕಂಡು ಕಂಗಾಲಾದ ದಾನಪ್ಪನ ತಂದೆ ಕರಿಹನುಮಂತಪ್ಪ ಕಾರಟಗಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ನಂತರ ಹುಡುಗಿ ಸುನೀತಾ, ಆಕೆಯ ತಂದೆ ಮರಿಬಸಪ್ಪ, ತಾಯಿ ಲಲಿತಮ್ಮ, ಆಕೆಯ ಅಕ್ಕನ ಗಂಡ ಹುಲುಗಪ್ಪನನ್ನು ಪೊಲೀಸರು ಬಂಧಿಸಿದ್ದಾರೆ. ಕೊಲೆಗೆ ಸಹಕರಿಸಿದ ಸಂಶಯದಲ್ಲಿ ಗ್ರಾಮಸ್ಥರಾದ ಕೋರಪ್ಪ, ಯಮನಪ್ಪ ಮತ್ತು ನಿಂಗಪ್ಪ ಎಂಬುವವರ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ದಲಿತ ಯುವಕನ ಕೊಲೆ ನಡೆದ ನಂತರ ಬರಗೂರು ಗ್ರಾಮದಲ್ಲಿ ಭಯಭೀತ ವಾತವಾರಣ ನಿರ್ಮಾಣವಾಗಿದೆ. ಇದು ಮರ್ಯಾದೆಹೀನ ಹತ್ಯೆಯಾಗಿದೆ. ಹಾಗಾಗಿ ಕೂಡಲೇ ಅಲ್ಲಿನ ದಲಿತರಿಗೆ ರಕ್ಷಣೆ ಒದಗಿಸಬೇಕು ಮತ್ತು ಗಲಭೆ ನಡೆಯದಂತೆ ತಡೆಯಲು ಶಾಂತಿ ಸಭೆ ನಡೆಸಬೇಕಿದೆ. ಕ್ಷೇತ್ರದ ಶಾಸಕರಾದ ದಲಿತ ಸಮುದಾಯದ ಬಸವರಾಜ್ ದಡೆಸಗೂರುರವರು ಗ್ರಾಮಕ್ಕೆ ಇನ್ನೂ ಬೇಟಿ ನೀಡದೆ ಇರುವುದು ದುರಂತ.

ಜಿಲ್ಲೆಯಲ್ಲಿ ಪದೇ ಪದೇ ಜಾತಿ ದೌರ್ಜನ್ಯದ ಘಟನೆಗಳು ವರದಿಯಾಗುತ್ತಿದ್ದರೂ ಜಿಲ್ಲಾಡಳಿತವಾಗಲಿ, ಸಮಾಜ ಕಲ್ಯಾಣ ಇಲಾಖೆಯಾಗಲಿ ಯಾವುದೇ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಸರ್ಕಾರ ರಾಜ್ಯದಲ್ಲಿ ನಡೆಯುವ ದಲಿತರು ಮತ್ತು ಶೋಷಿತರ ಮೇಲಿನ ಕೊಲೆ, ಶೋಷಣೆ ನಿಲ್ಲಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

# ವರದಿ ಬಿಡುಗಡೆ

ಘಟನೆ ನಡೆದ ನಂತರದ ಕ್ರಮಗಳಿಗಿಂತ ಇಂತಹ ಅಮಾನುಷ ಘಟನೆಗಳು ನಡೆಯದಂತೆ ಮುಂಜಾಗ್ರತೆ ವಹಿಸಬೇಕಿದೆ. ಕಕ್ಕರಗೋಳ ಗ್ರಾಮದ ದಲಿತ ಯುವಕ ರಾಘವೇಂದ್ರನ ಬರ್ಬರ ಕೊಲೆ ನಡೆದು ಒಂದು ವರ್ಷವಾಗಿದೆ. ಇತ್ತೀಚೆಗೆ ಜಿಲ್ಲೆಯ ಹೊಸಳ್ಳಿಯಲ್ಲಿ ದಲಿತರಿಗೆ ಕ್ಷೌರ ಮಾಡದೆ ಹಲ್ಲೆ ನಡೆಸಿದ್ದಕ್ಕೆ ಅವರು ನೊಂದು ಆತ್ಮಹತ್ಯೆಗೆ ಯತ್ನಿಸಿದ್ದರು. ಇಂತಹ ಹತ್ತಾರು ಘಟನೆಗಳು ನಡೆಯುತ್ತಲೇ ಇವೆ. ಹಾಗಾಗಿ ಸರ್ಕಾರವೇ ಈ ಜಾತಿ ದೌರ್ಜನ್ಯ ಕೊನೆಗೊಳಿಸಲು ಯತ್ನಿಸಬೇಕಿದೆ. ಆ ಮೂಲಕ ಶಾಂತಿ-ಸಾಮರಸ್ಯ ಕಾಪಾಡಬೇಕಿದೆ.

ಕೊಪ್ಪಳ ಜಿಲ್ಲೆಯಲ್ಲಿ ಜಾತಿ ದೌರ್ಜನ್ಯ ಪ್ರಕರಣಗಳು ಅತಿಹೆಚ್ಚಾಗಿದ್ದು, ಜಾತಿ ಆಚಾರಗಳನ್ನು ಇಂದಿಗೂ ಪಾಲಿಸಲಾಗುತ್ತಿದೆ. ಹಾಗಾಗಿ, ಜಾತಿ ದೌರ್ಜನ್ಯ ತಡೆಗಟ್ಟುವ ಕಾಯ್ದೆ ಕಲಂ 17ರ ಅನ್ವಯ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ, ರಾಜ್ಯ ಸರ್ಕಾರವು ಅಲ್ಲಿ ವಾಸವಾಗಿರುವ ದಲಿತ ಸಮುದಾಯದವರಿಗೆ ಅಧಿಕೃತ ರಕ್ಷಣೆಯನ್ನು ನೀಡಬೇಕು. ಶ್ರೀ । ದಾನಪ್ಪ ಅವರ ಕುಟುಂಬಕ್ಕೆ ಮತ್ತು ನೆರೆಹೊರೆಯವರಿಗೆ ಪೊಲೀಸ್ ರಕ್ಷಣೆಯನ್ನು ನೀಡಬೇಕು ಮತ್ತು ಸಂತ್ರಸ್ಥರಿಗೆ ಕೂಡಲೇ ಪರಿಹಾರವನ್ನು ನೀಡಬೇಕು. ಕೊಪ್ಪಳ ಜಿಲ್ಲಾಡಳಿತವು ಶೀಘ್ರದಲ್ಲೇ ಜಾತಿ ದೌರ್ಜನ್ಯವನ್ನು ತಡೆಗಟ್ಟಲು ಮತ್ತು ಜಾತಿ ದೌರ್ಜನ್ಯಕ್ಕೆ ಒಳಗಾದವರಿಂದ ದೂರುಗಳನ್ನು ಪಡೆಯಲು ಸಹಾಯವಾಣಿಯನ್ನು ಸ್ಥಾಪಿಸಬೇಕು.

ಈ ಕ್ರಮಗಳಿಗೆ ಜಿಲ್ಲಾಡಳಿತ, ಶಾಸಕರು ಮತ್ತು ಸಮಾಜ ಕಲ್ಯಾಣ ಇಲಾಖೆ ಮುಂದಾಗಬೇಕು. ಪೊಲೀಸರು ಉಳಿದ ಆರೋಪಿಗಳನ್ನು ಬಂಧಿಸಿ ಸಮರ್ಪಕ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಸೂಕ್ತ ಶಿಕ್ಷೆಯಾಗುವಂತೆ ಮಾಡಬೇಕು. ಆ ಮೂಲಕ ಈ ರೀತಿಯ ಘಟನೆಗಳು ನಡೆಯದಂತೆ ತಡೆಯಬೇಕು.



**ಬೆಂಗಳೂರಿನ ಬಸವನಗರದಲ್ಲಿ ಕೊರೋನಾ ಸೋಂಕಿಗೆ ಮೃತಪಟ್ಟ ಜೀವಗಳ ನೆನಪಿಸಿಕೊಳ್ಳುತ್ತಾ 'ಅಗಲಿದವರ ನೆನಪಿನಲ್ಲಿ' ರಾಷ್ಟ್ರ ಆಂದೋಲನವನ್ನು ಆಯೋಜಿಸಲಾಗಿತ್ತು**

## ಸಂದರ್ಶನ

# ಕೋವಿದ್‌ನಿಂದ ಕಲಿತ ಪಾಠಗಳು

### ಉದ್ಯೋಗ, ಕೂಲಿ, ವಸತಿ, ಆಹಾರ ಭದ್ರತೆ ಇವೆಲ್ಲವೂ ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಿಸಿದ ವಿಚಾರಗಳು

**(ಸಿಪಿಐಎಂಎಲ್ ಪಕ್ಷದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮತ್ತು ಎಐಸಿಸಿಟಿಯು ರಾಷ್ಟ್ರೀಯ ಕಾರ್ಯದರ್ಶಿ ಕ್ಲಿಫ್ಟನ್ ಡಿ' ರೊಜೇರಿಯೋ ಅವರೊಡನೆ ,ಜೂನ್ 18ರಂದು 'ಥರ್ಡ್ ಐ' ಮಾಧ್ಯಮದ ವತಿಯಿಂದ ನಡೆಸಲಾದ ಒಂದು ಸಂದರ್ಶನ.)**

**ಪ್ರಶ್ನೆ : ಆಹಾರದ ಹಕ್ಕು ಆಂದೋಲನವನ್ನು ಕುರಿತು ಮತ್ತು ಸಾರ್ವಜನಿಕ ಆರೋಗ್ಯದ ಒಂದು ಭಾಗವಾಗಿ ಆಹಾರ ಭದ್ರತೆಯನ್ನು ಕುರಿತು ಮಾತನಾಡಬಹುದೇ ?**

**ರೊ :** ಭಾರತದಲ್ಲಿರುವ ಹಸಿವು ಮತ್ತು ಅಪೌಷ್ಟಿಕತೆಯನ್ನು ಸಾಕ್ಷೀಕರಿಸುವ ಒಂದು ಪ್ರಕ್ರಿಯೆಯಾಗಿ ಆಹಾರದ ಹಕ್ಕಿಗಾಗಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ಈ ಅಂದೋಲನದ ಪ್ರಭಾವದಿಂದಲೇ ನ್ಯಾಯಾಲಯಗಳೂ ಸಹ ಕಾಡುತ್ತಿರುವ ಹಸಿವಿನ ಬಗ್ಗೆ ಕಾಳಜಿ ವಹಿಸಿವೆ. ಸರ್ಕಾರ ಅನುಸರಿಸುತ್ತಿರುವ ಆಹಾರದ ಹಕ್ಕಿನ ಆಂದೋಲನ ಒಂದು ರೀತಿಯಲ್ಲಿ ಕೇವಲ ರೋಗದ ಲಕ್ಷಣಗಳಿಗೆ ಚಿಕಿತ್ಸೆ ನೀಡಿದಂತೆ. ಏಕೆಂದರೆ ದೇಶವನ್ನು ಕಾಡುತ್ತಿರುವ ತೀವ್ರ ಬಡತನ ಮತ್ತು ಹಸಿವಿನ ಪ್ರಶ್ನೆಯ ಮೂಲ ಕಾರಣಗಳನ್ನು ನ್ಯಾಯಾಲಯಗಳು ಪರಿಗಣಿಸಿಯೇ ಇಲ್ಲ. ಅಂಗನವಾಡಿಗಳ ಮೂಲಕ ಜಾರಿಯಲ್ಲಿರುವ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ ಸಾಲುವುದಿಲ್ಲ.

ನನ್ನ ತಟ್ಟೆಯಲ್ಲಿ ಇಂದು ಏಕೆ ಅನ್ನ ಇಲ್ಲ ಎನ್ನುವ ಪ್ರಶ್ನೆಯನ್ನು ನಾವು ಪರಿಗಣಿಸಬೇಕಿದೆ. ಇದಕ್ಕೆ ಕಾರಣ ನಾನು ಸೋಮಾರಿಯಾಗಿರುವುದಲ್ಲ. ನನಗೆ ಉದ್ಯೋಗ ಇಲ್ಲ ಎನ್ನುವುದು ಕಾರಣ. ನನಗೆ ಉದ್ಯೋಗ ಇದೆ, ಕಷ್ಟಪಟ್ಟು ದುಡಿಯುತ್ತೇನೆ ಆದರೂ ನನ್ನ ಶ್ರಮಕ್ಕೆ ತಕ್ಕ ಕೂಲಿ ದೊರೆಯುತ್ತಿಲ್ಲ. ನನಗೆ ಉದ್ಯೋಗ ಭದ್ರತೆ ಇಲ್ಲ, ನನ್ನ ಆರೋಗ್ಯ ಹದಗೆಟ್ಟರೆ ನಾನು ಹಣ ಹೊಂದಿಸಲು ಕಷ್ಟಪಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಅಪೌಷ್ಟಿಕತೆ ವ್ಯಾಪಕವಾಗಿದ್ದರೆ ಅದಕ್ಕೆಎ ಕಾರಣ ಮಕ್ಕಳೂ ಅಲ್ಲ ಅಥವಾ ಅವರ ಪೋಷಕರೂ ಅಲ್ಲ. ಜನರಿಗೆ ಬದುಕಲು ಅವಶ್ಯವಾದ ಕೂಲಿ ನೀಡುವುದು ಮತ್ತು ಸಮಾನ ಸಂಪನ್ಮೂಲಗಳನ್ನು ಒದಗಿಸುವುದು ಇಂದಿನ ತುರ್ತು.

**ಪ್ರಶ್ನೆ : ನಮ್ಮ ಆಹಾರ ಭದ್ರತೆಯ ನೀತಿಯ ಬಗ್ಗೆ ಕಳೆದ ವರ್ಷದ ಘಟನೆಗಳು ಏನನ್ನು ಸೂಚಿಸುತ್ತವೆ ?**

**ರೊ :** ಕೇವಲ ನಾಲ್ಕು ಗಂಟೆಗಳ ಸಮಯಾವಕಾಶ ನೀಡಿ ಇಡೀ ದೇಶವನ್ನು ಸಂಪೂರ್ಣ ಲಾಕ್ ಡೌನ್ ಮಾಡುವುದನ್ನು ಹೇಗೆ ಭಾವಿಸಬೇಕು ? ನಮಗೆ ಅದರ ಗಂಭೀರತೆ ಅರಿವಿರಲಿಲ್ಲ ಎಂದು ಹೇಳಲಾಗುವುದಿಲ್ಲ. ದೇಶದ ಬಹುಸಂಖ್ಯೆಯ ಜನತೆಗೆ ನಾಳಿನ ಕೂಳು ಸಹ ದೊರೆಯುವ ಪರಿಸ್ಥಿತಿ ಇಲ್ಲ ಎನ್ನುವುದನ್ನು ನೀವು ಲೆಕ್ಕಿಸುವುದೇ ಇಲ್ಲ. ಹತ್ತು ದಿನಗಳ ನಂತರ ಸರ್ಕಾರ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯನ್ನು ಜಾರಿಗೊಳಿಸಿತ್ತು. ತಿಂಗಳಿಗೆ ಐದು ಕಿಲೋ ಅಕ್ಕಿ, ಎರಡು ಕಿಲೋ ಬೇಳೆಯನ್ನು ಎರಡು ತಿಂಗಳ ಕಾಲ ನೀಡಲು ನಿರ್ಧರಿಸಲಾಯಿತು. ನೆಲಮಟ್ಟದ ವಾಸ್ತವಗಳ ಅರಿವೇ ಇಲ್ಲದ ಈ ಯೋಜನೆ ಅತಾರ್ಕಿಕವೂ ಆಗಿತ್ತು. ಜನತೆಯ ದುಡಿಮೆಯ, ಸಂಪಾದನೆಯ ಹಕ್ಕುಗಳನ್ನೇ ಕಸಿದುಕೊಂಡಾಗ, ಅವರ ಕೈಯ್ಯಲ್ಲಿ ನಗದು ಹಣ ಇಲ್ಲದಾದಾಗ, ಅಡುಗೆ ಅನಿಲ ಲಭ್ಯವಿಲ್ಲದಾದಾಗ, ಎಣ್ಣೆ ಅಥವಾ ಮಸಾಲೆ ಪದಾರ್ಥಗಳನ್ನು ಖರೀದಿಸುವ ಶಕ್ತಿಯೂ ಇಲ್ಲವಾದಾಗ ಈ ರೀತಿಯ ಯೋಜನೆ ಜನರನ್ನು ಅಪಮಾನಗೊಳಿಸುತ್ತದೆ. ದಿನಗೂಲಿ ನೌಕರರ ಕುಟುಂಬದಲ್ಲಿ ಬದುಕುವವರಿಗೆ ಈ ಅನುಭವ ಆಗಿರಲಿಕ್ಕುಂಟು. ಅಕ್ಕಿ ಬೇಳೆ ನೀಡುವ ಮೂಲಕ ಮಹತ್ಸಾಧನೆ ಮಾಡಿದ್ದೇವೆ ಎಂದು ಹೇಳುವುದು ಹೇಗೆ ಸರಿ.

ಇವತ್ತಿನ ಕರ್ನಾಟಕದ ಪರಿಸ್ಥಿತಿಯನ್ನೇ ನೋಡಿ. ಈಗಾಗಲೇ ಲಾಕ್ ಡೌನ್ ಘೋಷಿಸಿ ಮೂರು ತಿಂಗಳು ಕಳೆದಿದೆ. ಲಾಕ್ ಡೌನ್ ಘೋಷಿಸಿದ ಸಂದರ್ಭದಲ್ಲಿ ಜನರ ಆಹಾರ ಭದ್ರತೆಯನ್ನು ರಕ್ಷಿಸುವ ನಿಟ್ಟಿನಲ್ಲಿ ಯಾವುದೇ ನೀತಿಯನ್ನೂ ಸರ್ಕಾರ ಹೊಂದಿರಲಿಲ್ಲ. ಬದಲಾಗಿ ಈಗ ಇಂದಿರಾ ಕ್ಯಾಂಟೀನ್ ಆಹಾರ ಪ್ಯಾಕೇಜ್‌ಗಳನ್ನೇ ಬಡಜನತೆಗೆ ದಿನಕ್ಕೆ ಮೂರು ಬಾರಿ ನೀಡುವುದಾಗಿ ಹೇಳಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅವಶ್ಯಕತೆ ಇದ್ದವರಿಗೆ ಗ್ರಾಮ ಪಂಚಾಯತ್‌ಗಳು ಆಹಾರ ಪ್ಯಾಕೇಜ್ ನೀಡುತ್ತವೆ. ಇದರಿಂದ ದುಡಿಯುವ ವರ್ಗಗಳು ದಿನಕ್ಕೆ ಮೂರು ಬಾರಿ ಆಹಾರಕ್ಕಾಗಿ ಕ್ಯೂ ನಿಲ್ಲಬೇಕಾಗುತ್ತದೆ. ಕಳೆದ ವರ್ಷದ ಅನುಭವದಿಂದ ರಾಜ್ಯ ಸರ್ಕಾರ ಯಾವ ಪಾಠ ಕಲಿತಿದೆ ? ಕರ್ನಾಟಕದಲ್ಲಿ ಕೋವಿದ್ 19 ಸಾಂಕ್ರಾಮಿಕ ನಿರ್ವಹಣೆಯ ಬಗ್ಗೆ ಮೊಕದ್ದಮೆಯೊಂದರಲ್ಲಿ ನಾನು ವಕೀಲಿಕೆ ವಹಿಸುತ್ತಿದ್ದ ಸಂದರ್ಭದಲ್ಲಿ, ನಾನು ಜನರು ದಿನನಿತ್ಯ ಆಹಾರಕ್ಕಾಗಿ ಕ್ಯೂ ನಿಲ್ಲುವಂತಾಗಬಾರದು ಎಂದು ಹೇಳಿದ್ದೆ. ಇದು ಜನರನ್ನು ಅಪಮಾನಗೊಳಿಸಿದಂತೆ. ಅವರ ಘನತೆಗೆ ಧಕ್ಕೆ ಉಂಟುಮಾಡಿದಂತೆ. ಪ್ರತಿದಿನವೂ ಕಠಿಣ ಉದ್ಯೋಗದಲ್ಲಿ ತೊಡಗಿ ಆಹಾರ ಸಂಪಾದಿಸುವ ಜನತೆಯ ಮೇಲೆ ಲಾಕ್ ಡೌನ್ ಹೇರಲಾಗಿದೆ. ಅವರಿಂದ ದುಡಿಮೆಯ ಶಕ್ತಿಯನ್ನು ಕಸಿದುಕೊಳ್ಳಲಾಗಿದೆ ಆದರೆ ಅವರನ್ನು ಒಂದು ತಟ್ಟೆ ಕೂಳಿಗಾಗಿ ಕ್ಯೂ ನಿಲ್ಲಲು ಹೇಳಲಾಗುತ್ತದೆ. ಇನ್ನು ವಸತಿಯ ಹಕ್ಕನ್ನು ಪರಿಗಣಿಸೋಣ. ಜನಸಾಮಾನ್ಯರ ಬಳಿ ಬಾಡಿಗೆ ಪಾವತಿ ಮಾಡಲು ಹಣ ಇಲ್ಲ. ಮನೆಯ ಮಾಲೀಕರು ಲಾಕ್ ಡೌನ್ ಅವಧಿಯಲ್ಲಿ ಬಾಡಿಗೆ ಕೇಳುವಂತಿಲ್ಲ ಎಂದು ಕಳೆದ ವರ್ಷ ಕೇಂದ್ರ ಸರ್ಕಾರ ಆದೇಶ ನೀಡಿತ್ತು. ಆದರೆ ಈ ಆದೇಶವನ್ನು ಜಾರಿಗೊಳಿಸಲೇ ಇಲ್ಲ. ಒಂದಾದಮೇಲೊಂದರಂತೆ ರಾಜ್ಯಗಳು ಲಾಕ್ ಡೌನ್ ಹೇರುತ್ತಲೇ ಹೋಗಿವೆ. ಆದರೆ ಜನತೆಗೆ ಸೂರು ದೊರೆಯುತ್ತಿಲ್ಲ, ಈಗಾಗಲೇ ಹಲವೆಡೆ ಜನರ ಎತ್ತಂಗಡಿಯಾಗುತ್ತಿರುವ ವರದಿಗಳು ಬರುತ್ತಿವೆ. ಇನ್ನು ಸಾಲ ಸೌಲಭ್ಯಗಳನ್ನು ಗಮನಿಸೋಣ. ಸ್ವ ಸಹಾಯ ಗುಂಪುಗಳನ್ನು ಗಮನಿಸೋಣ. ಕಳೆದ ವರ್ಷ ನಮ್ಮ ಪಕ್ಷದಿಂದ ಸಾಲ ಮನ್ನಾ ಆಂದೋಲನವನ್ನು ಲಾಕ್ ಡೌನ್ ನಂತರದಲ್ಲಿ ಹಮ್ಮಿಕೊಂಡಿದ್ದವು.

# ಸಂದರ್ಶನ

ಜನರನ್ನು ಚಿತ್ರಹಿಂಸೆಗೊಳಪಡಿಸುವ ಮೈಕ್ರೋ ಫೈನಾನ್ಸ್ ಕಂಪನಿಗಳ ವಿರುದ್ಧ ನಾವು ದನಿ ಎತ್ತಿದ್ದೇವೆ. ಒಂದು ಸ್ವಸಹಾಯ ಗುಂಪಿನಿಂದ ಸಾಲ ಪಡೆದವರು, ಪಾವತಿ ಮಾಡಲಾಗದಿದ್ದರೆ, ವಸೂಲಿಗಾಗಿ ಮನೆ ಬಾಗಿಲಿಗೆ ಜನ ಬರುತ್ತಾರೆ. ಇಲ್ಲಿ ಸಾಮಾನ್ಯ ಜನತೆ ಗೌರವ, ಮರ್ಯಾದೆಗೂ ಚ್ಯುತಿ ಬರುತ್ತದೆ. ಕಳೆದ ವರ್ಷದ ಲಾಕ್ ಡೌನ್ ನಿಂದಾದ ಪರಿಣಾಮವನ್ನೇ ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಸಿಎಂಐಇ ವರದಿಯ ಅನುಸಾರ ಅಪಾರ ಪ್ರಮಾಣದ ಉದ್ಯೋಗ ನಷ್ಟವಾಗಿದೆ. ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಲೇ ಇದೆ.ಕೂಲಿಯ ಪ್ರಮಾಣ ಕ್ಷೀಣಿಸುತ್ತಿದೆ. ಸಾಲ ನೀಡುವವರಿಂದ ದುಡಿಯುವ ವರ್ಗಗಳಿಗೆ ಮುಕ್ತಿಯೇ ಇಲ್ಲದಂತಾಗಿದೆ. ವೈಜ್ಞಾನಿಕ ತಳಹದಿಯ ಯಾವುದೇ ಆಡಳಿತ ನೀತಿಯನ್ನೂ ಸರ್ಕಾರ ಘೋಷಿಸಿಲ್ಲ.

**ಪ್ರಶ್ನೆ : ಆಹಾರ ಭದ್ರತೆ, ವಸತಿ, ಹಣಕಾಸು ಸೌಲಭ್ಯ ಮತ್ತಿತರ ಅಂಶಗಳನ್ನು ಪರಿಗಣಿಸದೆ ಯಾವುದೇ ಅಲ್ಪಕಾಲಿಕ ಸಾರ್ವಜನಿಕ ಆರೋಗ್ಯ ನೀತಿಯನ್ನು ರೂಪಿಸಲು ಸಾಧ್ಯವಿಲ್ಲ ಎಂದು ನೀವು ಭಾವಿಸುತ್ತೀರಿ. ನೀವು ಹೈಕೋರ್ಟ್‌ನಲ್ಲಿ ವಾದ ಮಂಡಿಸುತ್ತಿದ್ದ ಸಂದರ್ಭದಲ್ಲಿ ನೀವು ರಾಜ್ಯ ಸರ್ಕಾರಕ್ಕೆ ಈ ನಿಟ್ಟಿನಲ್ಲಿ ಯಾವ ರೀತಿಯ ಶಿಫಾರಸುಗಳನ್ನು ಮಾಡಿರುವಿರಿ?**

**ರೊ :** ಈ ಸಂಕಷ್ಟಕರ ಸಮಯದಲ್ಲಿ ಜನರಿಗೆ ನಗದು ನೀಡಬೇಕು ಎಂದು ನಾವು ಸಲಹೆ ನೀಡಿದ್ದೇವೆ. ಉಚಿತ ಪಡಿತರ ಕಿಟ್‌ಗಳನ್ನು ನೀಡುವುದು, ಅದರಲ್ಲಿ ಅಕ್ಕಿ, ಎಣ್ಣೆ, ಬೇಳೆ, ಮಸಾಲೆ, ಅಡುಗೆ ಅನಿಲ ಮುಂತಾದುವನ್ನು ಒಳಗೊಂಡಿರುವಂತೆ ಸೂಚಿಸಿದ್ದೇವೆ. ವಿಪತ್ತು ನಿರ್ವಹಣಾ ಕಾಯ್ದೆಯ ಅನುಸಾರ ಸರ್ಕಾರ ಆದೇಶವನ್ನು ಹೊರಡಿಸಿ ,ಸಾಮಾನ್ಯ ಜನರನ್ನು ಬಾಡಿಗೆ ಕೊಡಲಿಲ್ಲ ಎಂಬ ಕಾರಣಕ್ಕೆ ಎತ್ತಂಗಡಿ ಮಾಡಿಸುವುದಕ್ಕೆ ನಿರ್ಬಂಧ ಹಾಕಲು ಕೋರಿದ್ದೇವೆ. ವಿದ್ಯುತ್ ಮತ್ತು ನೀರಿನ ಶುಲ್ಕವನ್ನು ಮನ್ನಾ ಮಾಡುವುದು, ಮೈಕ್ರೋಫೈನಾನ್ಸ್ ಕಂಪನಿಗಳ , ಖಾಸಗಿ ಲೇವಾದೇವಿಗಾರರ ಮತ್ತು ಬ್ಯಾಂಕುಗಳ ಸಾಲದ ಕಂತುಗಳ ಮರುಪಾವತಿಗೆ ಆಗ್ರಹಿಸದಂತೆ ನಿರ್ಬಂಧ ಹೇರುವುದು ನಮ್ಮ ಬೇಡಿಕೆಯಾಗಿದೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಅಡಿ ಅಂಗನವಾಡಿಗಳ ಮುಖಾಂತರ ಆರು ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವುದು, ಗರ್ಭಿಣಿ ಮಹಿಳೆಯರಿಗೆ, ಹಾಲುಣಿಸುವ ತಾಯಂದಿರಿಗೆ ಮತ್ತು ಅಪ್ರಾಪ್ತ ಹೆಣ್ಣು ಮಕ್ಕಳಿಗೆ ಮನೆ ಬಾಗಿಲಿಗೇ ಪೌಷ್ಟಿಕ ಆಹಾರ ಒದಗಿಸುವುದು ನಮ್ಮ ಬೇಡಿಕೆಯಾಗಿದೆ. ಹಾಗೆಯೇ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವುದನ್ನೂ ಮುಂದುವರೆಸಲು ಕೋರಲಾಗಿದೆ. ಇದು ಶಾಸನಬದ್ಧ ಆದೇಶಗಳೇ ಆಗಿರುವುದರಿಂದ ಮತ್ತೊಮ್ಮೆ ಆಗ್ರಹಿಸುವುದೇಕೆ ಎಂದು ನೀವು ಕೇಳಬಹುದು. ಏಕೆಂದರೆ ಕಳೆದ ವರ್ಷ ಸರ್ಕಾರ ಇದನ್ನು ಮಾಡಲಿಲ್ಲ. ಶಾಲೆಗಳು ಮುಚ್ಚಿವೆ ಎಂಬ ಕಾರಣಕ್ಕೆ ಮಧ್ಯಾಹ್ನದ ಬಿಸಿಯೂಟವನ್ನು ನೀಡಲೇ ಇಲ್ಲ. ಅದಕ್ಕೆ ಸಮನಾದ ಧಾನ್ಯಗಳನ್ನು ನೀಡುವುದಾಗಿಯೂ, ಮನೆಯಲ್ಲೇ ತಯಾರಿಸಿಕೊಳ್ಳಬೇಕೆಂದೂ ಸರ್ಕಾರ ಆದೇಶಿಸಿತ್ತು. ಇದನ್ನೂ ಸಹ ಕೆಲವು ತಿಂಗಳುಗಳ ಕಾಲ ಮಾಡಲಿಲ್ಲ. ಹಾಗಾಗಿ ನಾವು ನ್ಯಾಯಾಲಯದ ಮೊರೆ ಹೋಗಬೇಕಾಯಿತು.

**ಪ್ರ : ಸಾರ್ವಜನಿಕ ಆರೋಗ್ಯ ನೀತಿಯನ್ನು ವ್ಯಾಪಕ ನೆಲೆಯಲ್ಲಿ ಪರಿಗಣಿಸಿದಾಗ, ಕೋವಿಡ್ 19 ಸಂದರ್ಭದಲ್ಲಿ ಇದನ್ನು ಒಂದು ಆಡಳಿತ ನೀತಿಯನ್ನಾಗಿ ಜಾರಿಗೊಳಿಸುವ ಪ್ರಯತ್ನಗಳು ನಿಮಗೆ ಕಾಣುತ್ತಿವೆಯೇ ?**

**ರೊ :** ಕೋವಿಡ್ 19 ಸಂದರ್ಭದಲ್ಲಿ ಹೇಳುವುದಾದರೆ ಕೇರಳ ಅನುಸರಿಸಿದ ಮಾದರಿ ಒಪ್ಪುವಂತಹುದು. ಅಲ್ಲಿ ಸೋಂಕಿತರ ಸಂಖ್ಯೆ ತೀವ್ರ ಹೆಚ್ಚಾಗಿದ್ದರೂ ಸಾವಿನ ಪ್ರಮಾಣ ಕಡಿಮೆ ಇದೆ. ಅಂದರೆ ತಕ್ಷಣದ ಆರೋಗ್ಯ ಕಾಳಜಿ ವಹಿಸುತ್ತಿರುವುದು ಸ್ಪಷ್ಟವಾಗುತ್ತದೆ. ಅಲ್ಲಿ ಆಮ್ಲಜನಕ ಇಲ್ಲದೆ, ಹಾಸಿಗೆ ಇಲ್ಲದೆ ಸೋಂಕಿತರು ಸತ್ತ ಒಂದೇ ಒಂದು ಘಟನೆಯನ್ನೂ ಗುರುತಿಸಲಾಗುವುದಿಲ್ಲ. ಲಾಕ್ ಡೌನ್ ಘೋಷಿಸಿದ ಕೂಡಲೇ ಅಲ್ಲಿನ ಸರ್ಕಾರ ಪ್ರತಿಯೊಂದು ಕುಟುಂಬಕ್ಕೂ ಆಹಾರ ಕಿಟ್ ನೀಡಿದೆ. ಇದು ಜನರನ್ನು ಗೌರವಯುತವಾಗಿ ಕಾಣುವ ಒಂದು ವಿಧಾನ. ಮುಂಬಯಿಯ ಟ್ರಯೇಜ್ ವ್ಯವಸ್ಥೆಯ ಲಕ್ಷಣಗಳೂ ಇದ್ದು ಇದನ್ನು ಈಗ ಪರಿಶೀಲಿಸಬೇಕಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಹರಡುತ್ತಿರುವುದನ್ನು ನೋಡಿದರೆ, ಉತ್ತರಪ್ರದೇಶದ ಉದಾಹರಣೆಯನ್ನೇ ತೆಗೆದುಕೊಂಡರೆ, ಪೂರ್ವ ತಯಾರಿ ನಡೆಸದೆ ಹೋದರೆ ಗಂಭೀರ ಪರಿಣಾಮಗಳನ್ನು ಎದುರಿಸುವುದು ಶತಃಸಿದ್ಧ. ಪ್ರತಿಯೊಂದು ಗ್ರಾಮ ಪಂಚಾಯತ್‌ನಲ್ಲೂ ಒಂದು ಕೋವಿಡ್ ಕೇಂದ್ರ ಇರಬೇಕು. ಜನರನ್ನು ಮನೆಯಲ್ಲೇ ಕ್ವಾರಂಟೈನ್ ಆಗಲು ಅಪೇಕ್ಷಿಸಲಾಗುವುದಿಲ್ಲ. ಏಕೆಂದರೆ ಮನೆಗಳು ಚಿಕ್ಕದಾಗಿರುವತ್ತವೆ, ಬಡತನ ಕಾಡುತ್ತಿರುತ್ತದೆ. ಕ್ವಾರಂಟೈನ್ ಆಗಬೇಕಾದರೆ , ಟೆಸ್ಟಿಂಗ್ ನಡೆಯಬೇಕಾದರೆ ಹಳ್ಳಿಗಳಲ್ಲಿ ಕೋವಿಡ್ ಕೇಂದ್ರಗಳು ಇರಬೇಕು. ಕನಿಷ್ಟ ಆಮ್ಲಜನಕ ಪೂರೈಕೆ ಇರಬೇಕು ಮತ್ತು ಔಷಧಿಗಳು ಲಭ್ಯವಿರಬೇಕು. ಸೋಂಕು ಹೆಚ್ಚಾದಲ್ಲಿ ಜನರು ಕೋವಿಡ್ ಕೇಂದ್ರಕ್ಕೆ ಹೋಗುತ್ತಾರೆ. ಅಲ್ಲಿ ವೈದ್ಯರು, ಆಶಾ ಕಾರ್ಯಕರ್ತೆಯರು ಮತ್ತು ಶುಶ್ರೂಷಕ ಸಿಬ್ಬಂದಿ ಸೋಂಕಿತ ವ್ಯಕ್ತಿಗೆ ಸೂಕ್ತ ಚಿಕಿತ್ಸೆ ಒದಗಿಸಲು ಸಾಧ್ಯ.

**ಪ್ರಶ್ನೆ: ಕೋವಿಡ್ ಪರಿಣಾಮದಿಂದ ಸಾರ್ವಜನಿಕ ಆರೋಗ್ಯವನ್ನು ಕುರಿತ ಚರ್ಚೆಗಳು ಮುನ್ನೆಲೆಗೆ ಬಂದಿವೆಯೇ?**

**ರೊ :** ಜನರು ಕೋವಿಡ್ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಯಾವುದೇ ಪ್ರತಿಭಟನೆಗಳು ಸಾಧ್ಯವಾಗುತ್ತಿಲ್ಲ. ಹಾಗಾಗಿ ಸಾರ್ವಜನಿಕ ಚರ್ಚೆಯೂ ನಡೆಯುತ್ತಿಲ್ಲ. ಮಧ್ಯಮ ವರ್ಗಗಳಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಾಮರ್ಥ್ಯ ಇರುವುದರಿಂದ, ಅಲ್ಲಿಯೇ ಲಸಿಕೆಯನ್ನೂ ಪಡೆಯಲು ಸಾಧ್ಯ. ಆದರೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೂಲ ಸೌಕರ್ಯಗಳಿಗಾಗಿ ಖರ್ಚು ಮಾಡಿದ ಹಣವನ್ನು ಕುರಿತು ಚರ್ಚೆ ಮಾಡಲು ಸಾಧ್ಯವಿದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಕೊರತೆಗಳು ದೇಶಾದ್ಯಂತ ಒಂದೇ ತೆರನಾಗಿ ಕಾಣುವುದಿಲ್ಲ. ಕೆಲವು ರಾಜ್ಯಗಳಲ್ಲಿ ಉತ್ತಮ ಸೌಲಭ್ಯಗಳಿವೆ. ಕೆಲವೆಡೆ ಸಂಪೂರ್ಣ ಕುಸಿದುಹೋಗಿವೆ. ಈ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಅವಶ್ಯತೆಯಂತೂ ಇದ್ದೇ ಇದೆ. ಆಮ್ಲಜನಕದ ಪೂರೈಕೆಯ ವಿಚಾರದಲ್ಲಿ, ರೆಮಿಡಿಸಿವಿರ್ ಮತ್ತು ಟಾಕ್ಲಿಜುಮಾಬ್ ಮಾತ್ರೆಗಳ ಸರಬರಾಜು ವಿಚಾರದಲ್ಲಿ ಎಲ್ಲವನ್ನೂ ಕೇಂದ್ರೀಕರಿಸಲಾಗಿದೆ.

# ಸಂದರ್ಶನ

ಯಾವ ರಾಜ್ಯಕ್ಕೆ ಎಷ್ಟು ನೀಡಬೇಕು ಎನ್ನುವುದನ್ನು ಕೇಂದ್ರ ಸರ್ಕಾರ ನಿರ್ಧರಿಸುತ್ತಿದೆ. ಲಸಿಕೆಯ ವಿಚಾರದಲ್ಲೂ ಸಹ ಕೇಂದ್ರ ಸರ್ಕಾರವೇ ಎಲ್ಲವನ್ನೂ ನಿಯಂತ್ರಿಸುತ್ತಿದೆ. ಕೇಂದ್ರ ಸರ್ಕಾರ ಲಾಭ ಗಳಿಸುವ ತವಕದಲ್ಲಿದೆ. ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಇದು ಚಿಂತೆಗೀಡುವ ವಿಚಾರ. ಕೋವಿದ್ 19 ಸಂದರ್ಭದಲ್ಲಿ ಒಕ್ಕೂಟ ವ್ಯವಸ್ಥೆಯ ಮೇಲೆ ಆಕ್ರಮಣ ನಡೆಯುತ್ತಿರುವುದು ಸ್ಪಷ್ಟವಾಗಿದೆ. ರಾಜ್ಯ ಸರ್ಕಾರಗಳ ನಿರ್ಣಯಗಳಿಗೆ ಮಾನ್ಯತೆ ನೀಡಲಾಗುತ್ತಿಲ್ಲ. ಆಡಳಿತದ ಜವಾಬ್ದಾರಿ ಮತ್ತು ಕರ್ತವ್ಯಗಳ ವಿಕೇಂದ್ರೀಕರಣ ಪ್ರಕ್ರಿಯೆಗೆ ಹಿನ್ನಡೆ ಉಂಟಾಗಿದೆ. ಇದನ್ನು ಕೂಡಲೇ ಪರಿಹರಿಸಬೇಕಿದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ವಹಣೆಯಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಸ್ವಚ್ಛತಾ ಕಾರ್ಮಿಕರು ಪ್ರಮುಖ ಪಾತ್ರ ವಹಿಸುತ್ತಾರೆ. ಸ್ವಚ್ಛತಾ ಕಾರ್ಮಿಕರನ್ನು ಮುಂಚೂಣಿ ಕಾರ್ಮಿಕರು ಎಂದೂ ಆಶಾ ಕಾರ್ಯಕರ್ತರನ್ನು ಆರೋಗ್ಯ ಸೇವಾ ಕಾರ್ಮಿಕರೆಂದೂ ಪರಿಗಣಿಸಲಾಗುತ್ತದೆ. ಕೋವಿದ್ ವಿರುದ್ಧ ಸಂಗ್ರಾಮದಲ್ಲಿ ಈ ಕಾರ್ಮಿಕರು ಸದಾ ಸಕ್ರಿಯರಾಗಿದ್ದಾರೆ. ದೇಶದ ಬಹುಪಾಲು ಸ್ವಚ್ಛತಾ ಕಾರ್ಮಿಕರು ಗುತ್ತಿಗೆ ಕಾರ್ಮಿಕರಾಗಿದ್ದು ನಿಗದಿತ ಕನಿಷ್ಟ ವೇತನವನ್ನೂ ಪಡೆಯುತ್ತಿಲ್ಲ. ಇವರು ತೀವ್ರ ಶೋಷಣೆಯನ್ನು ಎದುರಿಸುತ್ತಿದ್ದಾರೆ. ಕೋವಿದ್ ಸಂದರ್ಭದಲ್ಲಿ ಕೊರೋನಾ ಸೋಂಕಿತರ ಮನೆಯಿಂದ ತರುವ ಕಸವನ್ನು ಇತರ ಸಂಗ್ರಹದಿಂದ ಬೇರ್ಪಡಿಸದೆ ಹೋದರೆ, ಸೋಂಕು ತಗಲುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಆದರೆ ಇದನ್ನು ಪಾಲಿಸಲಾಗುತ್ತಿಲ್ಲ. ಸ್ವಚ್ಛತಾ ಕಾರ್ಮಿಕರಿಗೆ ಕನಿಷ್ಟ ಸುರಕ್ಷತೆಯನ್ನೂ ನೀಡಲಾಗುತ್ತಿಲ್ಲ. ಇದರಿಂದಲೇ ಹೆಚ್ಚಿನ ಕಾರ್ಮಿಕರ ಸಾವು ಸಂಭವಿಸುತ್ತಿದೆ.

ಇದು ಕೇವಲ ವರ್ಗ ಪ್ರಶ್ನೆಯೊಂದೇ ಅಲ್ಲ. ಜಾತಿ ಮತ್ತು ಲಿಂಗದ ಸಮಸ್ಯೆಗಳೂ ಇವೆ. ಸರ್ಕಾರ ಈ ಕಾರ್ಮಿಕರ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಿದೆ ಎನ್ನುವುದನ್ನೂ ಗಮನಿಸಬೇಕಿದೆ. ಆಸ್ಪತ್ರೆಗಳಲ್ಲೂ ಸಹ ನರ್ಸ್‌ಗಳನ್ನು ಗುತ್ತಿಗೆ ಮೇಲೆ ನೇಮಿಸಲಾಗುತ್ತಿದೆ. ನಾಲ್ಕನೆ ದರ್ಜೆಯ ಕಾರ್ಮಿಕರಲ್ಲಿ ಬಹುಪಾಲು ಮಹಿಳೆಯರೇ ಇದ್ದಾರೆ. ಎಲ್ಲರೂ ಗುತ್ತಿಗೆ ಕಾರ್ಮಿಕರಾಗಿದ್ದಾರೆ. ಇದೇ ರೀತಿಯ ಶೋಷಣೆಯನ್ನು ಎದುರಿಸುತ್ತಿದ್ದಾರೆ. ಕೋವಿದ್ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿ ನಿಂತು ಕಾರ್ಯ ನಿರ್ವಹಿಸುತ್ತಿದ್ದರೂ ಈ ಕಾರ್ಮಿಕರು ತಮ್ಮ ಕಾರ್ಯಕ್ಷೇತ್ರದಲ್ಲಿ ತೀವ್ರ ಶೋಷಣೆ ಎದುರಿಸುತ್ತಿದ್ದಾರೆ. ತಮ್ಮ ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದಾರೆ. ಈ ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಬೇಕಿದೆ.

**ಪ್ರ : ಆಸ್ಪತ್ರೆ ಸೌಕರ್ಯ ಮತ್ತು ಔಷಧಿಗಳ ಪೂರೈಕೆಯಷ್ಟೇ ಆರೋಗ್ಯಕ್ಕೆ ಸಂಬಂಧಿಸಿದೆ ಎನ್ನುವಂತಹ ವಾತಾವರಣದಲ್ಲಿ, ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸುಭದ್ರ ಅಡಿಪಾಯ ನಿರ್ಮಿಸಲು ಏನು ಸಲಹೆ ನೀಡುವಿರಿ ?**

**ರೊ :** ಜೀವನ ನಿರ್ವಹಣೆಗೆ ನೀಡುವ ವೇತನ ಸಮರ್ಪಕವಾಗಿದ್ದರೆ ಸಾರ್ವಜನಿಕ ಆರೋಗ್ಯವೂ ವೃದ್ಧಿಸುತ್ತದೆ. ನಾವಿನ್ನೂ ಕನಿಷ್ಟ ಕೂಲಿಯ ಯುಗದಲ್ಲೇ ಇದ್ದೇವೆ. ಈ 8 ಅಥವಾ 10 ಸಾವಿರ ಕನಿಷ್ಟ ವೇತನ ಜೀವನ ನಿರ್ವಹಣೆಗೆ ಸಮರ್ಪಕವಾಗಿರುವುದಿಲ್ಲ. ಸಂವಿಧಾನದಲ್ಲೂ ಸಹ ಬದುಕಲು ಪೂರಕವಾದ ವೇತನದ ಬಗ್ಗೆ ಪ್ರಸ್ತಾಪಿಸಲಾಗಿದೆ. ನಮ್ಮ ಅಂದಾಜಿನ ಪ್ರಕಾರ ಇಂದಿನ ಪರಿಸ್ಥಿತಿಯಲ್ಲಿ ಕನಿಷ್ಟ ವೇತನ 25 ಸಾವಿರ ರೂಗಳಷ್ಟಾದರೂ ಇರಬೇಕು. ಜೀವನನಿರ್ವಹಣೆಯ ಕೂಲಿ ಇದಕ್ಕಿಂತಲೂ ಹೆಚ್ಚಿರಬೇಕು. ಕಳೆದ ಮೂವತ್ತು ವರ್ಷಗಳಲ್ಲಿ ದುಡಿಮೆಯ ಕ್ಷೇತ್ರವು ಅನೌಪಚಾರಿಕ ಕ್ಷೇತ್ರದಲ್ಲೇ ಕಾರ್ಯನಿರ್ವಹಿಸುತ್ತಿದ್ದು ಎಲ್ಲವೂ ಗುತ್ತಿಗೆ ಆಧಾರದ ಮೇಲೆ ನಡೆಯುತ್ತಿದೆ. ಇದನ್ನು ಸರಿಪಡಿಸುವುದಾದರೆ, ಎಲ್ಲ ವೇತನವೂ ಹೆಚ್ಚಾಗುತ್ತದೆ. ಕಾರ್ಮಿಕರು ಉತ್ತಮ ಉದ್ಯೋಗ ಮತ್ತು ಸುಭದ್ರತೆಯಿಂದ ಇರುತ್ತಾರೆ. ಕಾರ್ಮಿಕರಿಗೆ ತಮ್ಮ ಸೂರು ಒದಗಿಸುವಷ್ಟು ವೇತನವನ್ನು ನೀಡುವುದು ಖಚಿತವಾದರೆ, ಆಹಾರದ ಕೊರತೆ ಇಲ್ಲದಂತೆ ಪಡಿತರ ವ್ಯವಸ್ಥೆಯನ್ನು ಜಾರಿಗೊಳಿಸುವುದಾದರೆ ಒಂದು ಹಂತದಲ್ಲಿ ಸಮಾನತೆಯನ್ನು ಸಾಧಿಸುವ ಪ್ರಯತ್ನ ಮಾಡಬಹುದು. ಇದು ಮೂಲ ಅವಶ್ಯಕತೆ. ಅನೇಕರಿಗೆ ಹಲವು ಕಾರಣಗಳಿಂದ ಕೆಲಸ ಮಾಡಲು ಆಗುವುದಿಲ್ಲ. ಪ್ರತಿಯೊಂದು ಕುಟುಂಬಕ್ಕೂ ಕನಿಷ್ಟ ಮಾಸಿಕ ಆದಾಯವನ್ನು ಖಚಿತವಾಗಿ ನಿಗದಿಪಡಿಸಿದರೆ ಎಲ್ಲರೂ ಸಹಮಾನವರಂತೆ ಬದುಕಬಹುದು.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಆಸ್ಪತ್ರೆಗಳನ್ನು ರಾಷ್ಟ್ರೀಕರಣ ಮಾಡುವುದು ಇಂದಿನ ಸನ್ನಿವೇಶದಲ್ಲಿ ಅನಿವಾರ್ಯ. 2020ರಲ್ಲಿ ಸ್ಪೇನ್ ಹೀಗೆ ಮಾಡಿದೆ. ಸರ್ಕಾರ ಇದಕ್ಕೆ ತಯಾರಿಲ್ಲ ಎನ್ನುವುದಾದರೆ, ವಿಪತ್ತು ನಿರ್ವಹಣಾ ಕಾಯ್ದೆಯ ಅನುಸಾರ ಸರ್ಕಾರ ಅವಶ್ಯ ಸಂಪನ್ಮೂಲಗಳನ್ನು ವಶಕ್ಕೆ ಪಡೆಯಬಹುದು. ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಂದು ಆರೋಗ್ಯ ಸೇವೆಯ ಸಂಸ್ಥೆಯೂ ಸರ್ಕಾರದ ನಿಯಂತ್ರಣಕ್ಕೊಳಪಟ್ಟಿದೆ ಎಂದು ಸರ್ಕಾರ ಘೋಷಿಸಬಹುದು.

**ಪ್ರ : ಆರೋಗ್ಯ ಸೇವೆಯ ವಿಕೇಂದ್ರೀಕರಣ ಮತ್ತು ಅದಕ್ಕೆ ಪೂರಕವಾದ ನಿರ್ಧಾರಗಳನ್ನು ಕೈಗೊಳ್ಳುವುದು, ರಾಷ್ಟ್ರೀಕರಣಕ್ಕೆ ಪರ್ಯಾಯ ಎಂದು ಹೇಳುವಿರಾ ?**

**ರೊ :** ಇದು ಸಾಧ್ಯವಾಗಬಹುದು. ಆದರೆ ಎಲ್ಲಿಂದ ಆರಂಭವಾಗುತ್ತದೆ ಎನ್ನುವುದು ಮುಖ್ಯ. ಇವತ್ತಿನ ಆಡಳಿತ ವ್ಯವಸ್ಥೆಯಲ್ಲಿ ಹೀಗೆ ಮಾಡುವುದಾದರೆ ಇದು ಸಾಧ್ಯವಾಗುವುದಿಲ್ಲ. ಕೇರಳದಲ್ಲಿ ಸಾಕಷ್ಟು ವಿಕೇಂದ್ರೀಕರಣ ನಡೆದಿದೆ. ಅಲ್ಲಿನ ಪಂಚಾಯತ್‌ಗಳು ರಬ್ಬರ್ ಸ್ಟ್ಯಾಂಪ್‌ಗಳಾಗಿ ಉಳಿದಿಲ್ಲ. ಯೋಜನೆಗಳನ್ನು ಸಿದ್ಧಪಡಿಸುವುದರಿಂದ ಹಿಡಿದು ಬಹುತೇಕ ನಿರ್ಧಾರಗಳನ್ನು ಪಂಚಾಯತ್ ಮಟ್ಟದಲ್ಲೇ ಕೈಗೊಳ್ಳಲಾಗುತ್ತದೆ. ವಿಕೇಂದ್ರೀಕರಣ ಅತ್ಯವಶ್ಯ ಇದರೊಟ್ಟಿಗೆ ಹಣಕಾಸು ಸ್ಥಿರತೆಯೂ ಮುಖ್ಯ. ಉತ್ತರ ಕರ್ನಾಟಕದಂತಹ ಬಡತನ ಎದುರಿಸುತ್ತಿರುವ ಪ್ರದೇಶಗಳಲ್ಲಿ ಗ್ರಾಮಗಳಿಗೆ ತಮ್ಮದೇ ಆದ ನಿರ್ಧಾರ ಕೈಗೊಳ್ಳುವಂತೆ ಅಪೇಕ್ಷಿಸಲಾಗುವುದಿಲ್ಲ. ಹಣಕಾಸು ಸ್ಥಿರತೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಸಂಪನ್ಮೂಲಗಳು ಸುಲಭವಾಗಿ ಲಭ್ಯವಾಗುವಂತಿರಬೇಕು.

# ಸಂದರ್ಶನ

ನಮ್ಮ ಶ್ರೇಣೀಕೃತ ಸಮಾಜದ ಮೂಲ ರಚನೆಯಲ್ಲೇ ಇರುವ ಈ ಅಸಮಾನತೆಗಳನ್ನು ಹೇಗೆ ಸರಿಪಡಿಸುವುದು ಎನ್ನುವುದೇ ಪ್ರಶ್ನೆ. ಇದು ಕೇವಲ ಒಂದು ನಿರ್ಣಯದಿಂದ ಪರಿಹಾರವಾಗುವುದಿಲ್ಲ. ಶಿಕ್ಷಣ ವ್ಯವಸ್ಥೆಯನ್ನೇ ಗಮನಿಸಿ. ಅಲ್ಲಿ ಅಸಮಾನತೆಯೇ ತುಂಬಿದ ಪೈಪೋಟಿಯನ್ನು ನೋಡುತ್ತಿದ್ದೇವೆ. ಸಮಾಜದಲ್ಲಿ ಸಮಾನತೆಯ ಮನೋಭಾವ ಇಲ್ಲದಿದ್ದರೆ ಆರೋಗ್ಯ ವ್ಯವಸ್ಥೆಯಲ್ಲಿ ಮಾತ್ರವೇ ಸಮಾನತೆಯನ್ನು ತರಲು ಸಾಧ್ಯವಿಲ್ಲ.

ನಮ್ಮ ಸಂವಿಧಾನದಲ್ಲಿ ಒಂದು ಆದರ್ಶದ ಕಲ್ಪನೆಯಲ್ಲೇ ಭ್ರಾತೃತ್ವವನ್ನು ಪ್ರಸ್ತಾಪಿಸಲಾಗಿದೆ. ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಇದನ್ನು ಕಾಣುತ್ತೇವೆ. ಏಕೆಂದರೆ ನಮ್ಮ ಶ್ರೇಣೀಕೃತ ಸಮಾಜದಲ್ಲಿ ಅನುಕಂಪ ಮತ್ತು ಸಹಾನುಭೂತಿಗೆ ಆಸ್ಪದವೇ ಇರುವುದಿಲ್ಲ. ಯಾವುದೇ ಆಡಳಿತ ನೀತಿಯನ್ನು ರೂಪಿಸಬಾರದು ಎಂದು ನಾನು ಹೇಳುವುದಿಲ್ಲ ಆದರೆ ಭ್ರಾತೃತ್ವವನ್ನು ಸಾಧಿಸುವುದು ನಮ್ಮ ಆದ್ಯತೆಯಾಗಬೇಕು. ಇವೆಲ್ಲವೂ ಯುಟೋಪಿಯನ್, ಕಾಲ್ಪನಿಕ ಎನಿಸಬಹುದು. ಅಂಗನವಾಡಿಯೊಂದು ಮುಚ್ಚಿದರೆ, ಮಕ್ಕಳಿಗೆ ತಿನ್ನಲು ಕೂಳು ದೊರೆಯದೆ ಹೋದರೆ ಆ ಮಕ್ಕಳು ತಮ್ಮ ಆಹಾರದ ಹಕ್ಕುಗಳಿಗಾಗಿ ಹೋರಾಡಲಿ ಎಂದು ನಾನು ಹೇಳುವುದಿಲ್ಲ. ಬದಲಾಗಿ ಭ್ರಾತೃತ್ವ, ಸಮಾನತೆ, ಘನತೆಯನ್ನು ಸಂರಕ್ಷಿಸುವಂತಹ ಒಂದು ವ್ಯವಸ್ಥೆಯನ್ನು ನಾವು ರೂಪಿಸಬೇಕು. ಆಗ ಆಡಳಿತ ನೀತಿಯನ್ನು ರೂಪಿಸುವುದು ಸುಲಭವಾಗುತ್ತದೆ.

**ಮೂಲ: ದಿ ಥರ್ಡ್ ಐ | ಅನುವಾದ: ನಾ ದಿವಾಕರ್**





**ಕೊಪ್ಪಳ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಜಾತಿ ದೌರ್ಜನ್ಯ ಮತ್ತು ಕೊಲೆ ಪ್ರಕರಣಗಳನ್ನು ತಡೆಗಟ್ಟಲು ಒತ್ತಾಯಿಸುತ್ತಾ 'ಕೊಪ್ಪಳ ಚಲೋ' ಕಾರ್ಯಕ್ರಮವನ್ನು ದಲಿತ-ದಮನಿತರ ಒಕ್ಕೂಟ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಲಾಗಿತ್ತು**

# ನನ್ನ ಜನ

**ಕವಿ: ಸಿದ್ಧಲಿಂಗಯ್ಯ**

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು
ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು
ಬರಿಗೈಲೇ ಬಂದೋರು ಉಸ್ಸೆಂದು ಕೂತೋರು
ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು
ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
ತಳಾದೀಗೆ ಸಿಕ್ಕಿದೋರು ನನ್ನ ಜನಗಳು
ಬೀದಿಯಲ್ಲಿ ಬಿದ್ದೋರು ಸದ್ದಿಲ್ಲದೆ ಇದ್ದೋರು
ಒಳಗೊಳಗೇ ಅತ್ತೋರು ನನ್ನ ಜನಗಳು
ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
ಬೆಂದು ಬೂದಿಯಾದೋರು ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡಜನಕೆ
ಬೂಟುಮೆಟ್ಟು ಹೊಲೆದೋರು ನನ್ನ ಜನಗಳು
ಚಿನ್ನವನ್ನು ತೆಗೆದೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲಿ ಬಾಳುತಾರೆ ನನ್ನ ಜನಗಳು



Kannada Liberation | Monthly Publication
RNI No. KARKAN/2002/07847
Posting at Bengaluru, Karnataka

# ನಮ್ಮ ಕಾರ್ಯಕ್ರಮಗಳು











## ಮುಂಚೂಣಿ ಯೋಧರ ಹಕ್ಕೊತ್ತಾಯ ದಿನ

ಕಾಂಟ್ರಾಕ್ಟ್ ಹೆಲ್ತ್ ಎಂಪ್ಲಾಯೀಸ್ ಫೆಡರೇಶನ್ | ಆಲ್ ಇಂಡಿಯಾ ಮುನಿಸಿಪಲ್ ವರ್ಕರ್ಸ್ ಫೆಡರೇಶನ್




EDITORIAL OFFICE: NO. 19, BHARAT BHAVAN, NO. 35, FIRST FLOOR, OPP. BALAJI PLYWOODS, INFANTRY ROAD, SHIVAJINAGAR, BANGALORE - 560 001.

Email: cpimlkarnataka@gmail.com
Facebook & Twitter: @CPIMLKar
Printed and Published by Clifton D' Rozario for the State Committee, CPIML (Liberation)
No. 19, Bharat Bhavan, No. 35, First Floor, Opp. Balaji Plywoods, Infantry Road, Shivajinagar, Bangalore - 560 001.

Printed at: